CAREERINDIA

Language Code : **07**

# JSS-24-I

मुख्य परीक्षा पुस्तिका संख्या / Main Test Booklet No.

इस पुस्तिका में **20** मुद्रित पृष्ठ हैं।
This booklet contains **20** Printed pages.

**प्रश्न-पत्र-I / PAPER-I**
**कन्नड़ भाषा परिशिष्ट**
**Kannada Language Supplement**
**भाग-IV & V / PART-IV & V**

मुख्य परीक्षा पुस्तिका कोड / Main Test Booklet Code

**D**

**इस परीक्षा पुस्तिका को तब तक न खोलें जब तक कहा न जाए।**
**Do not open this Test Booklet until you are asked to do so.**
**इस परीक्षा पुस्तिका के पिछले आवरण (पृष्ठ 19 व 20) पर दिए निर्देशों को ध्यान से पढ़ें।**
**Read carefully the Instructions on the Back Cover (Page 19 & 20) of this Test Booklet.**

**कन्नड़ में निर्देशों के लिए इस पुस्तिका का पृष्ठ 2 देखें। / FOR INSTRUCTIONS IN KANNADA SEE PAGE 2 OF THIS BOOKLET.**

## परीक्षार्थियों के लिए निर्देश

1. यह पुस्तिका मुख्य परीक्षा पुस्तिका की एक परिशिष्ट है, उन परीक्षार्थियों के लिए जो **या** तो भाग IV (भाषा I) **या** भाग V (भाषा II) **कन्नड़** भाषा में देना चाहते हैं, लेकिन **दोनों नहीं**।
2. परीक्षार्थी भाग I एवं भाग II **या** III के उत्तर मुख्य परीक्षा पुस्तिका से दें और भाग IV व V के उत्तर उनके द्वारा चुनी भाषाओं से।
3. अंग्रेज़ी व हिन्दी भाषा पर प्रश्न मुख्य परीक्षा पुस्तिका में भाग IV व भाग V के अन्तर्गत दिए गए हैं। भाषा परिशिष्टों को आप अलग से माँग सकते हैं।
4. इस पृष्ठ पर विवरण अंकित करने एवं उत्तर पत्र पर निशान लगाने के लिए **केवल काले/नीले बॉल पॉइंट पेन** का प्रयोग करें।
5. इस भाषा पुस्तिका का **संकेत** है **D**। यह सुनिश्चित कर लें कि इस भाषा परिशिष्ट पुस्तिका का संकेत, उत्तर पत्र के **पृष्ठ-2** एवं मुख्य परीक्षा पुस्तिका पर छपे संकेत से मिलता है। अगर यह भिन्न हो, तो परीक्षार्थी दूसरी भाषा परिशिष्ट परीक्षा पुस्तिका लेने के लिए निरीक्षक को तुरन्त अवगत कराएँ।
6. इस परीक्षा पुस्तिका में **दो** भाग IV और V हैं, जिनमें **60** वस्तुनिष्ठ प्रश्न हैं, जो प्रत्येक 1 अंक का है :
   भाग-IV : भाषा-I (कन्नड़) (प्र. 91 से प्र. 120)
   भाग-V : भाषा-II (कन्नड़) (प्र. 121 से प्र. 150)
7. भाग-IV में भाषा-I के लिए 30 प्रश्न और भाग-V में भाषा-II के लिए 30 प्रश्न दिए गए हैं। इस परीक्षा पुस्तिका में केवल कन्नड़ भाषा से संबंधित प्रश्न दिए गए हैं। **यदि भाषा-I और/या भाषा-II में आपके द्वारा चुनी गई भाषा(एँ) कन्नड़ के अलावा है तो कृपया उस भाषा वाली परीक्षा पुस्तिका माँग लीजिए। जिन भाषाओं के प्रश्नों के उत्तर आप दे रहे हैं वह आवेदन पत्र में चुनी गई भाषाओं से अवश्य मेल खानी चाहिए।**
8. **परीक्षार्थी भाग-V (भाषा-II) के लिए, भाषा सूची से ऐसी भाषा चुनें जो उनके द्वारा भाषा-I (भाग-IV) में चुनी गई भाषा से भिन्न हो।**
9. रफ कार्य परीक्षा पुस्तिका में इस प्रयोजन के लिए दी गई खाली जगह पर ही करें।
10. सभी उत्तर केवल OMR उत्तर पत्र पर ही अंकित करें। अपने उत्तर ध्यानपूर्वक अंकित करें। उत्तर बदलने हेतु श्वेत रंजक का प्रयोग निषिद्ध है।

## INSTRUCTIONS FOR CANDIDATES

1. This booklet is a supplement to the Main Test Booklet for those candidates who wish to answer **EITHER** Part IV (Language I) **OR** Part V (Language II) in **KANNADA** language, but **NOT BOTH**.
2. Candidates are required to answer Part I and Part II **OR** III from the Main Test Booklet and Parts IV and V from the languages chosen by them.
3. Questions on English and Hindi languages for Part IV and Part V have been given in the Main Test Booklet. Language Supplements can be asked for separately.
4. Use **Black/Blue Ball Point Pen only** for writing particulars on this page/ marking responses in the Answer Sheet.
5. The CODE for this Language Booklet is **D**. Make sure that the CODE printed on **Side-2** of the Answer Sheet and on your Main Test Booklet is the same as that on this Language Supplement Test Booklet. In case of discrepancy, the candidate should immediately report the matter to the Invigilator for replacement of the Language Supplement Test Booklet.
6. This Test Booklet has **two** Parts, IV and V, consisting of **60** Objective Type Questions, each carrying 1 mark :
   Part-IV : Language-I (Kannada) (Q. 91 to Q. 120)
   Part-V : Language-II (Kannada) (Q. 121 to Q. 150)
7. Part-IV contains 30 questions for Language-I and Part-V contains 30 questions for Language-II. In this Test Booklet, only questions pertaining to Kannada language have been given. **In case the language/s you have opted for as Language-I and/or Language-II is a Language other than Kannada, please ask for a Test Booklet that contains questions on that language. The language being answered must tally with the languages opted for in your Application Form.**
8. **Candidates are required to attempt questions in Part-V (Language-II) in a language other than the one chosen as Language-I (in Part-IV) from the list of languages.**
9. Rough work should be done only in the space provided in the Test Booklet for the same.
10. The answers are to be recorded on the OMR Answer Sheet only. Mark your responses carefully. No whitener is allowed for changing answers.

परीक्षार्थी का नाम (बड़े अक्षरों में) : ______
Name of the Candidate (in Capitals) :
अनुक्रमांक : (अंकों में) / Roll Number : in figures ______
: शब्दों में / in words ______
परीक्षा केन्द्र (बड़े अक्षरों में) : ______
Centre of Examination (in Capitals) :
परीक्षार्थी के हस्ताक्षर : ______ निरीक्षक के हस्ताक्षर : ______
Candidate's Signature : Invigilator's Signature :
Facsimile Signature Stamp of
Centre Superintendent : ______

www.careerindia.com

CAREERINDIA

Language Code : **07**

# JSS-24-I

**ಪ್ರಶ್ನೆ ಪತ್ರಿಕೆ–I**

**ಕನ್ನಡ ಭಾಷಾ ಪೂರಕ**

**ಭಾಗ IV ಮತ್ತು V**

**ಪ್ರಶ್ನೆ ಪುಸ್ತಿಕೆ ಸಂಕೇತ**

**D**

**ಈ ಪ್ರಶ್ನೆ ಪುಸ್ತಿಕೆ 20 ಪುಟಗಳನ್ನು ಹೊಂದಿರುತ್ತದೆ.**

**ಈ ಪ್ರಶ್ನೆ ಪುಸ್ತಿಕೆಯನ್ನು ತೆರೆಯುವಂತೆ ಹೇಳುವವರೆಗೆ ಯಾರೂ ತೆರೆಯಬಾರದು.**

**ಈ ಪ್ರಶ್ನೆ ಪುಸ್ತಿಕೆಯ ಹಿಂದಿನ ಪುಟದಲ್ಲಿ ಕೊಟ್ಟಿರುವ ಸೂಚನೆಗಳನ್ನು (ಪುಟ 19 ಮತ್ತು 20) ಗಮನವಿಟ್ಟು ಓದಿರಿ.**

**ಪರೀಕ್ಷಾರ್ಥಿಗಳಿಗೆ ಸೂಚನೆಗಳು :**

1. ಈ ಪ್ರಶ್ನೆ ಪತ್ರಿಕೆಯು ಮುಖ್ಯ ಪ್ರಶ್ನೆ ಪುಸ್ತಿಕೆಯ ಪೂರಕ ಪತ್ರಿಕೆಯಾಗಿದ್ದು, ಇದು ಭಾಗ IV (ಭಾಷೆ I) **ಅಥವಾ** ಭಾಗ V (ಭಾಷೆ II)ನ್ನು **ಕನ್ನಡ** ಭಾಷೆಯಲ್ಲಿ ಉತ್ತರಿಸಲು ಆಯ್ದುಕೊಂಡ ಅಭ್ಯರ್ಥಿಗಳಿಗೆ ಅನ್ವಯವಾಗುತ್ತದೆ. ಅಭ್ಯರ್ಥಿಗಳು ಯಾವುದಾದರೂ ಒಂದನ್ನು ಆಯ್ಕೆ ಮಾಡಿಕೊಳ್ಳಬಹುದು **ಎರಡನ್ನೂ ಅಲ್ಲ**.
2. ಅಭ್ಯರ್ಥಿಗಳು ಮುಖ್ಯ ಪ್ರಶ್ನೆ ಪುಸ್ತಿಕೆಯ ಭಾಗ I, II ಮತ್ತು III ನ್ನು ಅವಶ್ಯಕವಾಗಿ ಉತ್ತರಿಸಬೇಕು ಮತ್ತು ಪೂರಕ ಪ್ರಶ್ನೆ ಪುಸ್ತಿಕೆಯಿಂದ ಭಾಗ IV ಮತ್ತು V ರ ಉತ್ತರವನ್ನು ತಾವು ಆಯ್ದುಕೊಂಡ ಭಾಷೆಯಲ್ಲಿ ಉತ್ತರಿಸಬೇಕು.
3. ಭಾಗ IV ಮತ್ತು ಭಾಗ V ರ ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಪ್ರಶ್ನೆಗಳನ್ನು ಮುಖ್ಯ ಪ್ರಶ್ನೆ ಪುಸ್ತಿಕೆಯಲ್ಲೇ ಕೊಡಲಾಗಿದೆ. ಇತರ ಪೂರಕ ಭಾಷೆಯ ಪುಸ್ತಿಕೆಯನ್ನು ಬೇರೆಯಾಗಿ ಕೇಳಿ ಪಡೆಯಬಹುದು.
4. ಈ ಪುಟದಲ್ಲಿ ವಿವರ ಬರೆಯಲು ಮತ್ತು ಉತ್ತರ ಪತ್ರಿಕೆಯಲ್ಲಿ ಗುರುತು ಮಾಡಲು **ಕೇವಲ ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ಉಪಯೋಗಿಸಿ.
5. ಈ ಭಾಷಾ ಪುಸ್ತಿಕೆಯ **ಸಂಕೇತ D** ಆಗಿದೆ. ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಮುದ್ರಣವಾಗಿರುವ ಸಂಕೇತದೊಡನೆ ಹೊಂದುತ್ತದೆಯೇ ಎಂದು ಸುನಿಶ್ಚಿತಗೊಳಿಸಿಕೊಳ್ಳಿರಿ. ಜೊತೆಗೆ ಪ್ರಶ್ನೆ ಪತ್ರಿಕೆಯ ಸಂಖ್ಯೆ ಮತ್ತು ಉತ್ತರ ಪತ್ರಿಕೆಯ ಸಂಖ್ಯೆ ಸರಿಹೊಂದುವುದನ್ನೂ ಸುನಿಶ್ಚಿತಗೊಳಿಸಿಕೊಳ್ಳಿ. ಒಂದು ವೇಳೆ ಇವೆರಡೂ ಬೇರೆಯಾಗಿದ್ದರೆ, ಪರೀಕ್ಷಾರ್ಥಿ ಬೇರೆ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ಕೊಡುವಂತೆ ನಿರೀಕ್ಷಕರಿಗೆ ತಕ್ಷಣ ಮನವಿ ಮಾಡಿರಿ.
6. ಈ ಪ್ರಶ್ನೆ ಪತ್ರಿಕೆಯಲ್ಲಿ **ಎರಡು** ಭಾಗಗಳಿವೆ ಭಾಗ IV ಮತ್ತು V, ಇದರಲ್ಲಿ **60** ವಸ್ತುನಿಷ್ಠ ಪ್ರಶ್ನೆಗಳಿವೆ, ಅವುಗಳಿಗೆ ಪ್ರತಿಯೊಂದಕ್ಕೂ **1** ಅಂಕ.<br>ಭಾಗ–IV : ಭಾಷಾ I – (ಕನ್ನಡ) (ಪ್ರಶ್ನೆ 91 ರಿಂದ 120)<br>ಭಾಗ–V : ಭಾಷಾ II – (ಕನ್ನಡ) (ಪ್ರಶ್ನೆ 121 ರಿಂದ 150)
7. ಭಾಗ–IV ರಲ್ಲಿ ಭಾಷೆ–I ಕ್ಕಾಗಿ 30 ಪ್ರಶ್ನೆಗಳು ಮತ್ತು ಭಾಗ–V ರಲ್ಲಿ ಭಾಷೆ–II ಕ್ಕಾಗಿ 30 ಪ್ರಶ್ನೆಗಳನ್ನು ಕೊಡಲಾಗಿದೆ. ಈ ಪ್ರಶ್ನೆ ಪತ್ರಿಕೆಯಲ್ಲಿ ಕೇವಲ ಕನ್ನಡ ಭಾಷೆಗೆ ಸಂಬಂಧಿಸಿದ ಪ್ರಶ್ನೆಗಳನ್ನು ಕೊಡಲಾಗಿದೆ. **ಒಂದು ವೇಳೆ ಭಾಷೆ–I ಮತ್ತು/ಅಥವಾ ಭಾಷೆ–II ರಲ್ಲಿ ನೀವು ಆಯ್ಕೆ ಮಾಡಿದ ಭಾಷೆಗಳು – ಕನ್ನಡ ಅಲ್ಲದೆ ಬೇರೆ ಇದ್ದರೆ, ದಯವಿಟ್ಟು ಆ ಭಾಷೆಯ ಪ್ರಶ್ನೆ ಪತ್ರಿಕೆ ಕೊಡುವಂತೆ ಮನವಿ ಮಾಡಿ. ನಿಮ್ಮ ಮನವಿ ಪತ್ರದಲ್ಲಿ ಆಯ್ಕೆ ಮಾಡಿದ ಭಾಷೆ ಹಾಗೂ ನೀವು ಉತ್ತರ ಬರೆಯುವ ಭಾಷೆ ಹೊಂದಿಕೆಯಾಗಬೇಕು.**
8. **ಪರೀಕ್ಷಾರ್ಥಿ ಭಾಗ–V (ಭಾಷೆ–II) ಕ್ಕಾಗಿ, ಭಾಷೆ–I (ಭಾಗ–IV) ರಲ್ಲಿ ಆರಿಸಿಕೊಂಡ ಭಾಷೆಯಲ್ಲದೇ ಕೊಟ್ಟಿರುವ ಪಟ್ಟಿಯಲ್ಲಿ ಬೇರೆ ಭಾಷೆಯನ್ನು ಆರಿಸಿಕೊಳ್ಳಬೇಕು.**
9. ಕಚ್ಚಾ ಕೆಲಸ/ಬರವಣಿಗೆಯನ್ನು ಪ್ರಶ್ನೆ ಪತ್ರಿಕೆಯಲ್ಲಿ ಅದಕ್ಕಾಗಿಯೇ ಖಾಲಿ ಬಿಟ್ಟಿರುವ ಸ್ಥಾನದಲ್ಲಿಯೇ ಮಾಡಬೇಕು.
10. ನಿಮ್ಮ ಎಲ್ಲಾ ಉತ್ತರಗಳನ್ನು ಕೇವಲ (OMR) ಉತ್ತರ ಪತ್ರಿಕೆಯಲ್ಲಿಯೇ ನಮೂದಿಸಿ. ನಿಮ್ಮ ಉತ್ತರವನ್ನು ಎಚ್ಚರಿಕೆಯಿಂದ ನಮೂದಿಸಿ. ಉತ್ತರ ಬದಲಾಯಿಸಲು ಬಿಳಿಯ ಬಣ್ಣದ (Whitener) ಉಪಯೋಗ ನಿಷೇಧಿಸಲಾಗಿದೆ.

ಪರೀಕ್ಷಾರ್ಥಿಯ ಹೆಸರು (ದೊಡ್ಡ ಅಕ್ಷರಗಳಲ್ಲಿ) : ______________________

ಕ್ರಮ ಸಂಖ್ಯೆ : (ಅಂಕೆಗಳಲ್ಲಿ) : ______________________

: (ಅಕ್ಷರಗಳಲ್ಲಿ) : ______________________

ಪರೀಕ್ಷಾ ಕೇಂದ್ರ (ದೊಡ್ಡ ಅಕ್ಷರಗಳಲ್ಲಿ) : ______________________

ಪರೀಕ್ಷಾರ್ಥಿಯ ಸಹಿ : ______________ ನಿರೀಕ್ಷಕರ ಸಹಿ : ______________

Facsimile signature stamp of
Centre Superintendent : ______________________

www.careerindia.com

CAREERINDIA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 91 - 120**) ಉತ್ತರಿಸಬೇಕು.

Candidates should attempt the questions from **Part-IV (Q.No. 91-120)**, if they have opted **KANNADA** as **Language-I** only.

www.careerindia.com

CAREERINDIA

# PART–IV
## LANGUAGE-I
## KANNADA

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–I** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–IV** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **91-120**) ಉತ್ತರಿಸಬೇಕು.

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 91-99) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಹಾಸನದ ಹತ್ತಿರದ ಸಕಲೇಶಪುರದ ದ್ಯಾವೇಗೌಡನ ವಿಶಾಲವಾದ ಕಾಫಿ ತೋಟದಲ್ಲಿ ನಮ್ಮ ಸಿದ್ಧ ಅದೇ ಸುಡಗಾಡು ಸಿದ್ಧ ಬಂದಿದ್ದ. ಆದ್ರೆ ಮಾಮೂಲಿನಂತೆ ಇರಲಿಲ್ಲ. ಆಕಾಶವೇ ಕಳಚಿ ತಲೆ ಮೇಲೆ ಬಿದ್ದಂತೆ ಇದ್ದ ಸಿದ್ಧ.

ಆಗ ದ್ಯಾವೇಗೌಡ್ರು **"**ಏನು ಸಿದ್ಧ ಈ ಹ್ಯಾಪ್ ಮೋರೆ ? ಏನು ಕಥೆ, ಏನ್ ವ್ಯಥೆ ಈ ನಡುವೆ**"** ಎಂದ್ರು. ಸಿದ್ಧು ಬೀಡಿ ಸೇದುತ್ತ **"**ಏನಿಲ್ಲಾ ಬುದ್ಧಿ, ಹಿಂಗೇಯಾ**"** ಅಂದ ಸಿದ್ಧುವಿನ ಗೋಳು ಇದ್ದದ್ದೇ ಎಂದು ಗೊಣಗಿದ ದ್ಯಾವೇಗೌಡ.

ಸಿದ್ಧನ ಪೂರ್ವಿಕರು ಸುಡಗಾಡು ಕಾಯುವ ಕಾಯಕದವರು. ಆದ್ರೆ ಕಾಲನಂತರ ಸಿದ್ಧನ ಕುಟುಂಬ ಪೇಟೆಗೆ ವಲಸೆ ಬಂದಿತು. 58 ಜನರ ಕುಟುಂಬ ಒಡೆದು ಇಬ್ಭಾಗವಾಗಿತ್ತು. ಸಿದ್ಧನ ನಾಲ್ಕು ಜನ ಗಂಡು ಮಕ್ಕಳು ಬೇರೆ ಬೇರೆ ಊರು ಪಟ್ಟಣಗಳಿಗೆ ವಲಸೆ ಹೋಗಿದ್ರು ಆದ್ರೆ 5 ಜನ ಹೆಣ್ಣು ಮಕ್ಕಳು ಹತ್ತಿರವಿದ್ರು.

ಈ ಐದು ಜನ ಹೆಣ್ಣು ಮಕ್ಕಳನ್ನು ಮದುವೆ ಮಾಡಿ ಒಂದು ದಡ ಮುಟ್ಟಿಸುವಲ್ಲಿ ಸಿದ್ಧನ ಜೀವಕ್ಕೆ ಸಾಕಾಗಿ ಹೋಗಿತ್ತು. ಹಿರಿಮಗಳಿಗೆ ಈಗ 56 ಕಿರಿಯವಳಿಗೆ 26. ಹಿರಿಮಗಳಿಗೆ ಮೊಮ್ಮಕ್ಕಳಾಗಿವೆ. ಅವರೂ ಮದುವೆಗೆ ಬಂದಿದ್ದಾರೆ. ಹಳ್ಳಿಗಾಡಿನ ಜನರಲ್ಲಿ ಮದುವೆ ಎಂಬ ಸಂಪ್ರದಾಯವು ಬಹಳ ಕಟ್ಟುನಿಟ್ಟು. ಚಿಕ್ಕ ವಯಸ್ಸಿನಲ್ಲಿ ಜರಗುತ್ತೆ. ಇದಕ್ಕೆ ಅವರು ಬಹಳ ಪ್ರಾಮುಖ್ಯತೆ ಕೊಡ್ತಾರೆ.

ದೊಡ್ಡ ಮಗಳ ಮದುವೆ ಆದಾಗ ಅವಳಿಗೆ ಕೇವಲ 16 ವರ್ಷ. ಹದಿನಾರು ಎಂದ್ರೆ ಅವರಲ್ಲಿ ಮದುವೆಗೆ ಸರಿಯಾದ ವಯಸ್ಸು. ಪರಿಚಿತ ಕುಟುಂಬಗಳಲ್ಲಿ, ರಕ್ತ ಸಂಬಂಧದಲ್ಲೇ ಮದುವೆ ಜರಗುತ್ತದೆ. ಇವರ ಪೂರ್ವಿಕರು ಆಫ್ರಿಕಾ, ನೈಜಿರಿಯಾ ಖಂಡಗಳಿಂದ ಭಾರತಕ್ಕೆ ಬಹಳ ಹಿಂದೆಯೇ ವಲಸೆ ಬಂದವರು.

ದೊಡ್ಡ ಮಗಳು ಲಕ್ಕಿ ಮದುವೆ ಮಾಡಲು ಸಿದ್ಧ ದ್ಯಾವೇಗೌಡ್ರ ತೋಟದಲ್ಲಿ, ಹೊಲದಲ್ಲಿ ಆಳಾಗಿ ಹಗಲು ರಾತ್ರಿ ಜೀತದಾಳಾಗಿ ದುಡಿದಿದ್ದ. ಆಗ ವಯಸ್ಸಿತ್ತು. ರಟ್ಟೆಯಲ್ಲಿ ಬಲ ಇತ್ತು. ಹುಮ್ಮಸ್ಸು ಇತ್ತು. ಆ ಅಲ್ಪ ಮೊತ್ತದ ಹಣ ಸಹಾಯಕ್ಕೆ ಗೌಡ ಅನೇಕ ಕಠಿಣ ಕಂಡಿಷನ್ಸ್ ಹಾಕಿದ್ದ. ಈ ಗೌಡ ವಿಚಿತ್ರ ಸ್ವಭಾವದವ. ದುರಾಸೆ ಕ್ರೌರ್ಯ ಜಾಸ್ತಿ. ಅವನಿಗೆ ಹೆಣ್ಣುಗಳ ಚಟ ಬೇರೆ. ಗೌಡನ ದುಷ್ಟ ಕೆಂಪು ಕಣ್ಣಿಗೆ ಬಿದ್ದ ಯಾವ ಹೆಣ್ಣು ಅವನಿಂದ ಬಿಡಿಸಿಕೊಳ್ಳಲು ಆಗುತ್ತಿರಲಿಲ್ಲ.

ಆದ್ರೆ ನಿಸ್ಸಹಾಯಕರು, ಮುಗ್ಧರು ಮತ್ತು ಅನಕ್ಷರಸ್ಥರು ದಟ್ಟ ಕಾಡು–ಮೇಡುಗಳಲ್ಲಿ ನೂರಾರು ವರ್ಷಗಳಿಂದ ಬದುಕಿ ಬಾಳಿದ ಈ ಕಾಡು ಜನರಿಗೆ ನಾಗರೀಕತೆ ಇತ್ತೀಚೆಗೆ ಬಂದಿದೆ ಅಷ್ಟೇ. ಹಿಂದಿನ ಜನರಲ್ಲಿ ಬಹುತೇಕರು ಅನಕ್ಷರಸ್ಥರೇ. ಆದರೆ ಇತ್ತೀಚಿನ ಪೀಳಿಗೆಯವರು ಮಾತ್ರ ಸ್ವಲ್ಪ ಮಟ್ಟಿನ ಸಾಕ್ಷರು.

www.careerindia.com

CAREERINDIA

ದಟ್ಟ ಕಾಡಿನ ಮಧ್ಯೆ ವಾಸವಿದ್ದ ಸಿದ್ಧರ ಬಾಳಿನ ಪೀಳಿಗೆಗೆ ನಕ್ಸಲರು, NGO ಗಳು, ಸರ್ಕಾರಿ ಅಧಿಕಾರಿಗಳು, ಅರಣ್ಯ ಅಧಿಕಾರಿಗಳು ವರ ಮತ್ತು ಶಾಪವಿದ್ದಂತೆ. ಕೆಲ ಉತ್ತಮ NGO ಗಳು ಈ ಸಿದ್ಧರ ಮನಪರಿವರ್ತನೆ ಮಾಡಲು ಹರಸಾಹಸ ಮಾಡಿ ಸೋತಿವೆ ಬಂದ ದಾರಿಗೆ ಸುಂಕ ಇಲ್ಲವೆಂಬಂತೆ!

ನಮ್ಮ ಸರ್ಕಾರಗಳು, ಈ ಕಾಡು–ಹಳ್ಳಿಗಳಲ್ಲಿ ನಾಗರೀಕತೆ ತರಲು ಯತ್ನಿಸಿ ಯಶಸ್ವಿಯಾಗಿವೆ ತಕ್ಕಮಟ್ಟಿಗೆ. ಇತ್ತೀಚಿಗೆ 5-10 ವರ್ಷಗಳ ಹಿಂದೆ ಸರ್ಕಾರಿ ಶಾಲೆಯೊಂದು ಬಂದಿದೆ. ಟಿ.ವಿ. ಕನೆಕ್ಷನ್ ಬಂದಿದೆ. ಪ್ರಾಥಮಿಕ ಆರೋಗ್ಯ ಕೇಂದ್ರ ಬಂದಿದೆ. ಸಣ್ಣ ಪುಟ್ಟ ಗೂಡು ಅಂಗಡಿಗಳು, ಫ್ಯಾನ್ಸಿ ಸ್ಟೋರ್ಸ್, ಫ್ಯಾನ್ಸಿ ಐಟಮ್ಸ್ ಬಂದಿವೆ.

5 ಮಕ್ಕಳ ಮದುವೆ ಮಾಡಿ ಮುಗಿಸುವಲ್ಲಿ ಗಂಡು ಮಕ್ಕಳಿಗೆ ಒಂದು ಮಟ್ಟಿಗೆ ವಿದ್ಯೆ ನೌಕರಿ ಕೊಡಿಸುವಲ್ಲಿ ನಮ್ಮ ಪಾಪದ ಸಿದ್ಧ ಮತ್ತು ಅವನ ತಮ್ಮ ಸಿದ್ದೇಶನು ಸುಸ್ತಾಗಿ ಹೈರಾಣಾಗಿದ್ರು.

ಸಿದ್ಧನ ಒಡಹುಟ್ಟಿದವರು 5 ಜನ ಗಂಡು ಮಕ್ಕಳು, 5 ಜನ ಹೆಣ್ಣು ಮಕ್ಕಳು! ಅಯ್ಯೋ ಶಿವನೇ!

ಸಿದ್ಧನ ಕುಟುಂಬವನ್ನು ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಮೇಲೆತ್ತಲು ದ್ಯಾವೇಗೌಡನ ಪಾತ್ರ ಬಹಳ ದೊಡ್ಡದು. ಮಹತ್ವಪೂರ್ಣವಾದುದು. ಆದ್ರೆ ದ್ಯಾವೇಗೌಡ ಮತ್ತು ಅವನ ತಮ್ಮ ನರಸಿಗೌಡ ಇಬ್ಬರೂ ಬಡ, ಅಸಹಾಯಕ, ಅಶಿಕ್ಷಿತರನ್ನು ಶೋಷಿಸುವುದರಲ್ಲಿ ಎತ್ತಿದ ಕೈ. ಅದೇನು ಆನಂದವೋ ದೇವರೇ ಬಲ್ಲ.

ಸಿದ್ಧನ ಕುಟುಂಬದ ಹೆಣ್ಣು ಮಕ್ಕಳು ಈ ಹಾಳು ದ್ಯಾವೇಗೌಡನ ತೋಟ–ಹೊಲಗಳಲ್ಲಿ ಮೈಮುರಿದು ದುಡಿವರು. ಸಿಗುತ್ತಿದ್ದ ಸಂಬಳ ಅತೀ ಕಮ್ಮಿ ದೊಡ್ಡ ಕುಟುಂಬಕ್ಕೆ ಯಾವುದು ಸಾಲದು. ರಾವಣನ ಹೊಟ್ಟೆಗೆ ಅರೆ ಕಾಸಿನ ಮಜ್ಜಿಗೆಯಂತೆ. ಹೊಟ್ಟೆಗೆ ಬಟ್ಟೆಗೆ ಸಾಲುತ್ತಿರಲಿಲ್ಲ. ಈ ಕಾರಣ ಈ ಬಡಕುಟುಂಬ ಸಾಲ ಮಾಡುತ್ತಿತ್ತು. ಈ ಚಿಲ್ಲರೆ ಸಾಲಗಳನ್ನು ತೀರಿಸಲು ದ್ಯಾವೇಗೌಡನ ಹತ್ತಿರ ಸಾಲವನ್ನು ಮಾಡುವರು. ಬಡ್ಡಿ, ಚಕ್ರ ಬಡ್ಡಿ ತೆತ್ತಬೇಕು.

**91.** ಕಾಡು–ಮೇಡು ಪದವು :

(1) ಜೋಡು ನುಡಿ (2) ಅನ್ಯದೇಶ್ಯ ಪದ (3) ಬೆಟ್ಟ ಗುಡ್ಡ (4) ತತ್ಸಮ ಪದ

**92.** ಸಿದ್ಧರ ಮನಪರಿವರ್ತನೆ ಮಾಡಲು ಪ್ರಯತ್ನಿಸಿದವರು ಯಾರು ?

(1) ಎನ್.ಜಿ.ಓ. ಗಳು (2) ಅರಣ್ಯ ಅಧಿಕಾರಿಗಳು

(3) ದ್ಯಾವೇಗೌಡ (4) ಪೊಲೀಸರು

**93.** ರಾವಣನ ಹೊಟ್ಟೆಗೆ ಅರೆಕಾಸಿನ ಮಜ್ಜಿಗೆ ಎಂದರೇನು ?

(1) ಕಡೆದ ಮಜ್ಜಿಗೆ (2) ಸಾಕಷ್ಟಿಲ್ಲದಿರುವುದು

(3) ಆರು ಕಾಸಿಗೆ ಸಿಗುವುದು (4) ಹೊಟ್ಟೆ ಬಿರಿಯುವಷ್ಟು ಇರುವುದು

**94.** ಅಶಿಕ್ಷಿತ ಪದದ ವಿರುದ್ಧಾರ್ಥ ಪದ –

(1) ಸುಸಂಸ್ಕೃತ (2) ಶಿಕ್ಷಕ (3) ಶಿಕ್ಷಿತ (4) ನಿರೀಕ್ಷಿತ

**95.** ಸಿದ್ಧನ ಪೂರ್ವಿಕರ ಕಾಯಕ ಏನಾಗಿತ್ತು ?

(1) ಜೀತದ ಕೆಲಸ (2) ಸ್ಮಶಾನ ಕಾಯುವ ಕೆಲಸ

(3) ವ್ಯಾಪಾರ–ವ್ಯವಹಾರ (4) ವ್ಯವಸಾಯ

**96.** ಸಿದ್ಧನಿಗೆ ಎಷ್ಟು ಜನ ಹೆಣ್ಣುಮಕ್ಕಳು ?

(1) 4 (2) 8 (3) 7 (4) 5

www.careerindia.com

97. ಅನಕ್ಷರಸ್ಥರು ಎಂದರೇನು ?

(1) ನಿಸ್ಸಹಾಯಕರು (2) ಓದು ಬರಹ ಬಲ್ಲವರು
(3) ಅನಾಗರಿಕರು (4) ಓದು ಬರಹ ಗೊತ್ತಿಲ್ಲದವರು

98. ಮದುವೆಗೆ – ಈ ಪದದ ವಿಭಕ್ತಿ ಪ್ರತ್ಯಯ ತಿಳಿಸಿ.

(1) ಸಪ್ತಮಿ ವಿಭಕ್ತಿ (2) ಪ್ರಥಮಾ ವಿಭಕ್ತಿ (3) ಪಂಚಮಿ ವಿಭಕ್ತಿ (4) ಚತುರ್ಥಿ ವಿಭಕ್ತಿ

99. ಹೆಣ್ಣು ಮಕ್ಕಳ ಚಟ ಯಾರಿಗೆ ಇತ್ತು ?

(1) ಪೋಲೀಸರಿಗೆ (2) ಸಿದ್ಧನಿಗೆ (3) ನರಸಿಗೌಡನಿಗೆ (4) ದ್ಯಾವೇಗೌಡನಿಗೆ

**ನಿರ್ದೇಶನ : ಈ ಕೆಳಗಿನ ಕವನವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 100-105) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ನಾನೆ ನನ್ನ ವಿಧಾತ,
ಆವ ವಜ್ರಾಘಾತ ಕುಡುಗೀತು ನನ್ನ ಮುಂಗೈಯ ಕಸುವು ?
ಎದ್ದೇನು ಬಿದ್ದೇನು ನಸುನಕ್ಕು ಗೆದ್ದೇನು
ಕನಸೊಂದು ಸೆಳೆವವರೆಗಳುಕೆ ತುಸುವೂ.
ಈ ಬಾಳು ವಿಧಿವಶವು, ನಾವಿಲ್ಲಿ ಬರಿ ಕಸವು ಎಂದು ಗೋಣೆಳಿಸಿ ಗೋಳಿಡುವ ಪ್ರಾಣಿ
ನಿನ್ನ ಬಲಹೀನತೆಗೆ ವಿಧಿಯೆಂಬ ಹೆಸರಿಟ್ಟೆ
ಮರೆತೆ ನೀನೆಂಥ ತಾರಕನು ತ್ರಾಣಿ.
ಕೈಲಾಗದವರ ಕನವರಿಕೆ ವಿಧಿಯ ವಿಲಾಪ
ದೈವವೆಂಬುದು ಭೀರು ಮನದ ಭೂತ,
ಭೀತಿ ಭ್ರಾಂತಿಯ ನೀಗು ಮುನ್ನುಗ್ಗು ಮತ್ತಾಗು
ಬರಲಿದೆ ಭವಿಷ್ಯತ್ತಿಗಗ್ರ ದೂತ.

100. 'ಕೈಲಾಗದವನು' – ಈ ಪದದ ವಿರುದ್ಧಾರ್ಥಕ ಪದ :

(1) ಸಮರ್ಥ (2) ಅಸಮರ್ಥ
(3) ಕಾಲಿನಲ್ಲಿ ಮಾಡುವವ (4) ಕೈಯಲ್ಲಿ ಮಾಡುವವ

101. 'ವಿಧಾತ' – ಈ ಪದದ ಅರ್ಥ :

(1) ಬೇಡುವವನು (2) ಕೊಡುವವನು (3) ದೇವರು, ಬ್ರಹ್ಮ (4) ನಿರ್ಧಾರ

102. ಈ ಕವನದ ಮುಖ್ಯ ವಸ್ತು :

(1) ವರ್ತಮಾನ ಮತ್ತು ಭವಿಷ್ಯತ್ತಿನ ಸಂಕಟಗಳು
(2) ವಿಧಿಯ ಪ್ರಾಮುಖ್ಯತೆ
(3) ದೇಹದೌರ್ಬಲ್ಯದ ಮುಂದೆ ಅಸಹಾಯಕ ಮನಸ್ಸು
(4) ಮನುಷ್ಯನು ತನ್ನ ಸತ್ವದಲ್ಲಿ ತಾಳಬೇಕಾದ ನಂಬಿಕೆ

**103.** **'ಭೀರು ಮನ'** – ಈ ಪದದ ಅರ್ಥ :

(1) ಹೆಂಡಕುಡಿಯುವ ಮನಸ್ಸು (2) ಮುಗ್ಧ ಮನಸ್ಸು

(3) ಅಧೀರ ಮನಸ್ಸು (4) ಮಗುವಿನಂಥ ಮನಸ್ಸು

**104.** ವಿಧಿಯ ಬಗ್ಗೆ ಮಾತನಾಡುವವರು ಯಾರು ?

(1) ಸಾಮಾನ್ಯ ಮನುಷ್ಯರು (2) ಕೈಲಾಗದವರು

(3) ದೇವರನ್ನು ನಂಬುವವರು (4) ವಿಧಿಯಲ್ಲಿ ಭರವಸೆ ಇರುವವರು

**105.** **'ವಜ್ರಾಘಾತ'** – ಈ ಪದದ ಸಂಧಿಯ ಸ್ವರೂಪ :

(1) ಆದೇಶ ಸಂಧಿ (2) ಲೋಪ ಸಂಧಿ

(3) ಆಗಮ ಸಂಧಿ (4) ಸವರ್ಣದೀರ್ಘ ಸಂಧಿ

**106.** ನೀವು ಹಿಂದಿ ಶಿಕ್ಷಕರಾಗಿದ್ದೀರಿ. ಆದರೆ ನಿಮ್ಮನ್ನು ಪಂಜಾಬ್ ಪ್ರದೇಶದಲ್ಲಿರುವ ಪ್ರಾಥಮಿಕ ಶಾಲೆಗೆ ನಿಯೋಜಿಸಲಾಗಿದೆ. ನಿಮಗೆ ಆ ಪ್ರದೇಶದ ಸ್ಥಳೀಯ ಭಾಷೆ ಗೊತ್ತಿಲ್ಲದಿರುವುದರಿಂದ ನೀವು -

(1) ಹಿಂದಿಯನ್ನು ಕಲಿಯುವಂತೆ ಆ ಸಮುದಾಯವನ್ನು ಉತ್ತೇಜಿಸಿ.

(2) ಹಿಂದಿ ಮಾತನಾಡುವ ಪ್ರದೇಶಕ್ಕೆ ವರ್ಗಾವಣೆ ಮಾಡುವಂತೆ ಕೋರಿ ಕೂಡಲೇ ಅರ್ಜಿ ಸಲ್ಲಿಸಬೇಕು.

(3) ಮಗುವಿನ ಭಾಷೆಯನ್ನು ಸಂಪನ್ಮೂಲವಾಗಿ ಬಳಸಿ, ಕಲಿಸಲು ಪ್ರಾರಂಭಿಸಬೇಕು.

(4) ಇಂಗ್ಲಿಷ್‌ನಲ್ಲಿ ಮಾತನಾಡಿ.

**107.** ಮಗುವಿಗೆ ವಿಷಯವನ್ನು ತೀವ್ರವಾಗಿ ಕಲಿಸಿದ ನಂತರವೂ ಅದು ಸ್ವತಃ ತಾನೇ ಒಂದು ಪ್ಯಾರಾವನ್ನು ಬರೆಯಲಿಲ್ಲ. ಆದರೂ, ಮಗು ಅದನ್ನು ವಯಸ್ಕರ ಮತ್ತು ತನ್ನ ಸಹಾಧ್ಯಾಯಿಗಳ ಮಾರ್ಗದರ್ಶನದಲ್ಲಿ ಬರೆಯಲು ಸಮರ್ಥವಾಯಿತು. ಈ ಮಾರ್ಗದರ್ಶನವನ್ನು ಈ ಮುಂದಿನಂತೆ ಕರೆಯುತ್ತಾರೆ :

(1) ತಂಡದ ಕಲಿಕೆ

(2) ತಾತ್ಕಾಲಿಕವಾಗಿ ಸಹಾಯ ಮಾಡುವುದು

(3) ಸಹಾಧ್ಯಾಯಿಗಳ (Peer) ಮಾರ್ಗದರ್ಶನ

(4) ಸಹಾಧ್ಯಾಯಿಗಳ (Peer) ಸಲಹೆ

**108.** ಭಾಷಾರ್ಜನೆಯು ಈ ಕೆಳಕಂಡ ಸಂದರ್ಭಗಳಲ್ಲಿ ಮಾತ್ರ ಆಗುತ್ತದೆ :

(1) ಮಗುವನ್ನು ಭಾಷೆಗೆ ಒಡ್ಡಿದಾಗ

(2) ಮಗುವಿಗೆ ವ್ಯಾಕರಣದ ನಿಯಮಗಳನ್ನು ಕಲಿಸಿದಾಗ

(3) ಮಗುವಿಗೆ ಭಾಷಾಂತರದ ಅಭ್ಯಾಸವನ್ನು ಮಾಡಿಸಿದಾಗ

(4) ಮಗುವಿಗೆ ಓದುವುದಕ್ಕೆ ಅವಕಾಶ ನೀಡಿದಾಗ

**109.** ಪಠ್ಯಪುಸ್ತಕಕ್ಕೆ ಸಂಬಂಧಿಸಿದಂತೆ ಈ ಕೆಳಕಂಡ ಹೇಳಿಕೆಗಳಲ್ಲಿ ಯಾವ ಹೇಳಿಕೆ ಸರಿ ?

(1) ಪಠ್ಯಪುಸ್ತಕವನ್ನು ಬದಲಿಯಾಗಿ ಇಡಲಾಗುವುದಿಲ್ಲ.

(2) ಪಠ್ಯಪುಸ್ತಕವು ಶಿಕ್ಷಕರು ಮತ್ತು ವಿದ್ಯಾರ್ಥಿಗಳಿಗೆ ಅಂತಿಮ ವಿಷಯವಾಗಿದೆ.

(3) ಇದು ಪಠ್ಯಕ್ರಮದಲ್ಲಿ ಹೇಳಿರುವ ಉದ್ದೇಶಗಳನ್ನು ಸಾಧಿಸಲು ನೆರವಾಗುತ್ತದೆ.

(4) ಇದು ಶೈಕ್ಷಣಿಕ ಅವಧಿಗೆ ಸಂಬಂಧಿಸಿದ ಶೈಕ್ಷಣಿಕ ಚಟುವಟಿಕೆಗಳ ಯೋಜನೆಯಾಗಿದೆ.

www.careerindia.com

**110.** V ನೇ ತರಗತಿಯ ಶಿಕ್ಷಕರಾಗಿ, ನೀವು ಪಠ್ಯವನ್ನು ಸಂಪೂರ್ಣವಾಗಿ ಓದಬೇಕೆಂದು ವಿದ್ಯಾರ್ಥಿಗಳಿಗೆ ತಿಳಿಸಬೇಕು. ನಂತರ ಸಂದರ್ಭಕ್ಕೆ ಸಂಬಂಧಿಸಿದ ಪ್ರಶ್ನೆಗಳಿಗೆ (RTC) ಉತ್ತರ ನೀಡುವಂತೆ ಅವರಿಗೆ ತಿಳಿಸಬೇಕು. ಈ ಪ್ರಕ್ರಿಯೆಯಲ್ಲಿ ನೀವು ವಿದ್ಯಾರ್ಥಿಗಳನ್ನು ಈ ಮುಂದಿನ ಉದ್ದೇಶಕ್ಕಾಗಿ ಪ್ರೋತ್ಸಾಹಿಸುತ್ತೀರಿ :

(1) ಸೂಕ್ಷ್ಮ ಓದು (Intensive reading) (2) ಸ್ಥೂಲ ಓದು (Extensive reading)
(3) ಕ್ಷಿಪ್ರವಾಗಿ ಓದುವುದು (Scanning) (4) ಮೇಲ್ನೋಟದ ಓದು (Skimming)

**111.** __________ ಗ್ರಹಣ ಸಾಮರ್ಥ್ಯವು, ಪಠ್ಯದಿಂದ ನಿರ್ದಿಷ್ಟ ಮಾಹಿತಿಯನ್ನು ತೆಗೆಯುವ ಉದ್ದೇಶಕ್ಕಾಗಿ ಹೆಚ್ಚು ನಿಕಟವಾಗಿ ಮತ್ತು ಸೂಕ್ಷ್ಮವಾಗಿ ಪಠ್ಯದ ಭಾಗವೊಂದನ್ನು ಓದುವ ಕೌಶಲ್ಯವಾಗಿದೆ.

(1) ಮೌಲ್ಯನಿರ್ಧಾರಕ (Evaluative) (2) ಜಾಗತಿಕ (Global)
(3) ಸ್ಥಳೀಯ (Local) (4) ನಿಗಮನಾತ್ಮಕ (Inferential)

**112.** ವ್ಯಾಕರಣವನ್ನು ಕಲಿಸುವ ನಿಗಮನಾತ್ಮಕ ಪ್ರಸ್ತಾವವು (Deductive approach), ಈ ಕೆಳಗಿನಂತೆ ಸಮರ್ಥಿಸುತ್ತದೆ. ನಾವು ಮೊದಲು –

(1) ಅಭ್ಯಾಸದ ಮೂಲಕ ಅಭ್ಯಾಸ ಮಾಡಿಸಬೇಕು.
(2) ಉದಾಹರಣೆಗಳನ್ನು ಪರಿಚಯ ಮಾಡಿಸಬೇಕು.
(3) ನಿಯಮಗಳನ್ನು ಪರಿಚಯ ಮಾಡಿಸಬೇಕು.
(4) ನಿಜವಾದ ಸಂವಹನವನ್ನು ಪರಿಚಯ ಮಾಡಿಸಬೇಕು.

**113.** ಈ ಕೆಳಕಂಡ ಯಾವ ಅಂಶವು ಸಂಗತಿಗಳನ್ನು ಮೀರಿ ಅಂದಾಜು ಮಾಡುವ ಅಥವಾ ಊಹೆ ಮಾಡುವ ವಿಧಾನವಾಗಿದೆ ?

(1) ಬಹಿರ್ಗಣನೆ (Extrapolation) (2) ವಿವರಣೆ (Explanation)
(3) ವಿಶ್ಲೇಷಣೆ (Analysis) (4) ಊಹೆ (Inference)

**114.** ತರಗತಿಯಲ್ಲಿ ಮಾತೃಭಾಷೆಯನ್ನು ಹೊರಗಿಡುವುದು __________ ವಿಧಾನದ ಪ್ರಧಾನ ಲಕ್ಷಣವಾಗಿದೆ.

(1) ನೇರ (Direct)
(2) ಸ್ವಾಭಾವಿಕ ವಿಧಾನ
(3) ದ್ವಿಭಾಷಾ ವಿಧಾನ
(4) ಕೇಳಿಸುವ ಮೂಲಕ ಭಾಷೆ ಕಲಿಸುವ ವಿಧಾನ (Audio - lingual)

**115.** ಒಂದು ಮಗು ಕೆಲವು ಪದಗಳನ್ನು ತಪ್ಪಾಗಿ ಉಚ್ಚಾರಣೆ ಮಾಡಿದರೂ ಸಹ, ಅದು 'ಒಟ್ಟಾರೆ ಭಾಷಾ ಬಳಕೆಯನ್ನು' ಮಾಡಿದ್ದಕ್ಕಾಗಿ ಆ ಮಗುವನ್ನು ಒಬ್ಬ ಶಿಕ್ಷಕಿಯಾಗಿ ನೀವು ಪ್ರಶಂಸಿಸುತ್ತೀರಿ. ಇಲ್ಲಿ ನೀವು ನಿಮ್ಮ ತರಗತಿಯಲ್ಲಿ ಈ ಕೆಳಕಂಡ ವಿಧಾನವನ್ನು ಬಳಸುತ್ತಿದ್ದೀರಿ :

(1) ರಚನಾತ್ಮಕ ವಿಧಾನ (Structural)
(2) ಸಮಗ್ರ ಭಾಷೆ (Whole language)
(3) ಸಂವಹನಶೀಲ ವಿಧಾನ (Communicative)
(4) ನಿರ್ಮಾಣಾತ್ಮಕ ವಿಧಾನ (Constructivist)

CAREERINDIA

**116.** ಭಾಷಾ ಶಿಕ್ಷಕರು ಮುಕ್ತವಾಗಿ ಬರೆಯುವುದಕ್ಕೆ ವಿದ್ಯಾರ್ಥಿಗಳನ್ನು ಉತ್ತೇಜಿಸಬೇಕು. ಏಕೆಂದರೆ, ಮುಕ್ತವಾಗಿ (free) ಬರೆಯುವುದರ ಮುಖ್ಯ ಅನುಕೂಲವೆಂದರೆ, ಕಲಿಯುವವರು –

(1) ಅವರ ಪ್ರಥಮ ಭಾಷೆಯಿಂದ ಬರಹದ ಭಾಷೆಯ ಸ್ವರೂಪವನ್ನು ಸೇರಿಸಿಕೊಳ್ಳಬಹುದು.

(2) ಸುಲಲಿತವಾಗಿ ಮತ್ತು ಸೃಜನಾತ್ಮಕವಾಗಿ ಬರೆಯಲು ಉತ್ತೇಜಿಸುತ್ತದೆ.

(3) ಬರೆಯಬೇಕೇ ಅಥವಾ ಬೇಡವೇ ಎಂಬ ಸ್ವಾತಂತ್ರ್ಯ ಹೊಂದಿರಬೇಕು.

(4) ಹೆಚ್ಚು ಬರೆಯಬೇಕು ಅಥವಾ ಒಟ್ಟಾರೆಯಾಗಿ ಖಚಿತತೆಯನ್ನು ಹೊಂದಿರಬೇಕೆಂದು ಯೋಚಿಸಬಾರದು.

**117.** ಇದು, ಮಗು ಬುದ್ಧಿವಂತಿಕೆ ಮತ್ತು ತರ್ಕದಂತಹ ಉನ್ನತ ಮಟ್ಟದ ಮಾನಸಿಕ ಪ್ರಕ್ರಿಯೆಗಳನ್ನು ಉಪಯೋಗಿಸಬೇಕಾದ ಕಲಿಕೆಯ ವಿಧಾನವಾಗಿದೆ :

(1) ರಾಚನಿಕ ಕಲಿಕೆ (Structural learning)

(2) ಬಾಯಿಮಾತಿನ ಮೂಲಕ ಕಲಿಯುವುದು (Verbal learning)

(3) ಪರಿಕಲ್ಪನಾತ್ಮಕ ಕಲಿಕೆ (Concept learning)

(4) ಮೋಟಾರು ಕೌಶಲ್ಯದ ಕಲಿಕೆ (Motor skills)

**118.** ಈ ಕೆಳಕಂಡ ತರಗತಿಯ ಯಾವ ಪ್ರಯೋಗಗಳು ವಿದ್ಯಾರ್ಥಿಗಳಲ್ಲಿ ಮೌಖಿಕ (oral) ಭಾಷೆಯ ಬೆಳವಣಿಗೆಗೆ ಶಿಕ್ಷಕರಿಗೆ ನೆರವಾಗುತ್ತದೆ ?

(1) ಹೊಸ ಮತ್ತು ಪರಿಚಿತವಲ್ಲದ ಪದಗಳನ್ನು ಸರಿಯಾಗಿ ಉಚ್ಚಾರಣೆ ಮಾಡಲು ಅಭ್ಯಾಸ ಮಾಡಿಸುವುದು.

(2) ಶಿಕ್ಷಕರೊಂದಿಗೆ ಪಠ್ಯವನ್ನು ಒಟ್ಟಾಗಿ ಓದುವುದು.

(3) ಪದ್ಯವನ್ನು ಕಂಠವಾಠ ಮಾಡಿದ ನಂತರ ಅದನ್ನು ಒಟ್ಟಾಗಿ ಹಾಡುವುದು.

(4) ಪಾತ್ರ ನಿರ್ವಹಣೆಗಳಲ್ಲಿ ಭಾಗವಹಿಸುವುದು.

**119.** 'ಭಾಷೆ ಯಾದೃಚ್ಛಿಕವಾದ ವ್ಯವಸ್ಥೆ' ಎಂದು ನಾವು ಹೇಳಿದಾಗ ಅದರ ಅರ್ಥ :

(1) ಭಾಷೆಯು ಪೂರ್ವನಿರ್ಧರಿತ ತತ್ವಗಳನ್ನು ಅನುಸರಿಸುತ್ತದೆ.

(2) ಒಂದು ಭಾಷೆಯ ಪದಗಳು ಮತ್ತು ಅವುಗಳ ಅರ್ಥದ ನಡುವೆ ಅಂತರ್ನಿಹಿತ ಸಂಬಂಧವಿದೆ.

(3) ಪದಗಳು ಮತ್ತು ಅದರ ಅರ್ಥದ ನಡುವಿನ ಸಂಬಂಧವು ಯುಕ್ತ ಕಾರಣವನ್ನು ಆಧರಿಸಿದೆಯೇ ಹೊರತು ಆಯ್ಕೆಯ ಆಧಾರದ ಮೇಲಲ್ಲ.

(4) ಒಂದು ಭಾಷೆಯ ಪದಗಳು ಮತ್ತು ಅವುಗಳ ಅರ್ಥದ ನಡುವೆ ಯಾವುದೇ ಅಂತರ್ಗತ ಸಂಬಂಧವಿರುವುದಿಲ್ಲ.

**120.** ಭಾಷಾ ಕಲಿಕೆಯಲ್ಲಿ ವಿಶ್ಲೇಷಣಾತ್ಮಕ (diagnostic) ಪರೀಕ್ಷೆಯ ಉದ್ದೇಶ -

(1) ವಿದ್ಯಾರ್ಥಿಯ ಪ್ರಗತಿ ವರದಿಯಲ್ಲಿ ತೀರ್ಮಾನಗಳನ್ನು ದಾಖಲಿಸಬೇಕು.

(2) ಸಂಕ್ಷಿಪ್ತ ರೂಪದ ಮೌಲ್ಯಮಾಪನಕ್ಕಾಗಿ ಪ್ರಶ್ನೆಗಳನ್ನು ಯೋಜಿಸಿ ಸಿದ್ಧಪಡಿಸಬೇಕು.

(3) ಪೋಷಕರು – ಶಿಕ್ಷಕರ ಸಭೆಯಲ್ಲಿ (PTM) ಪೋಷಕರಿಗೆ ತಿಳಿಸಿ ಮತ್ತು ಗಮನ ನೀಡುವಂತೆ ಅವರಿಗೆ ಹೇಳಬೇಕು.

(4) ಕಲಿಯುವವರು ಅರ್ಥಮಾಡಿಕೊಳ್ಳುವ ವಿಷಯದಲ್ಲಿ ಕೊರತೆಗಳನ್ನು ತಿಳಿದುಕೊಂಡು ಅದಕ್ಕೆ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಬೇಕು.

www.careerindia.com

ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (**ಪ್ರಶ್ನೆ ಸಂಖ್ಯೆ 121-150**) ಉತ್ತರಿಸಬೇಕು.

Candidates should attempt the questions from **Part-V (Q.No. 121-150)**, if they have opted **KANNADA** as **Language-II** only.

www.careerindia.com

CAREERINDIA

## PART–V
## LANGUAGE-II
## KANNADA

| |
|---|
| ಅಭ್ಯರ್ಥಿಗಳು ಕನ್ನಡವನ್ನು **ಭಾಷೆ–II** ಎಂದು ಆರಿಸಿಕೊಂಡಿದ್ದರೆ ಮಾತ್ರ **ಭಾಗ–V** ರಲ್ಲಿರುವ ಪ್ರಶ್ನೆಗಳನ್ನು (ಪ್ರಶ್ನೆ ಸಂಖ್ಯೆ **121-150**) ಉತ್ತರಿಸಬೇಕು. |

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 121-128) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಆರರಿಂದ ಹದಿನಾರರವರೆಗಿನ ನಮ್ಮ ನಾಡಿನ ಬಾಲಕ–ಬಾಲಕಿಯರಲ್ಲಿಯೂ, ಯುವತಿಯರಲ್ಲಿಯೂ, ಜನಸಾಮಾನ್ಯರಲ್ಲಿಯೂ ಭಾವವೂ ಉಂಟಾಗಬೇಕೆಂಬ ಬೀಜರೂಪವಾಗಿ ಅಡಗಿರುವ ವಿಚಿತ್ರ ನೀರು ಗೊಬ್ಬರಗಳ ಸಹಾಯದಿಂದ ಯುವಕ ಗುಣಗ್ರಹಣಶೀಲತೆಯೂ, ಭಾವನೆಯಿಂದ, ಅದರಲ್ಲೂ ಕಾರ್ಯಶಕ್ತಿಗಳು, ಮೊಳಕೆಯಾಗಿ ಬೆಳೆಯಬೇಕಾದುದು ಅವಶ್ಯಕವು. ಆದುದರಿಂದ ಭಾರತೀಯ ಮಹನೀಯರ ಜೀವಿತಗಳೊಂದಿಗೆ ಪರದೇಶೀಯ ಮಹನೀಯರ ಜೀವಿತಗಳನ್ನೂ ಪ್ರಕಟಿಸಲು ಸಂಕಲ್ಪಿಸಿ, ಯೋಗ್ಯತಾನುಸಾರ ಹೆಣಗಿದೆ– ಎಂದು ಹೇಳಿದವರು. “ಸುಬೋಧ ಕುಸುಮಾಂಜಲಿ ಗ್ರಂಥಮಾಲೆಯನ್ನು ಸ್ಥಾಪಿಸಿ, ಅದರ ಮೂಲಕ ಮಹಾಪುರುಷರ ಜೀವನ ಚರಿತ್ರೆಗಳನ್ನು ಪ್ರಕಟಿಸಿ, ಅತ್ಯಂತ ಕಡಿಮೆ ಬೆಲೆಗೆ ಓದುಗರಿಗೆ ನೀಡಿ, ಕನ್ನಡಿಗರನ್ನು ಚಿಂತನಶೀಲರನ್ನಾಗಿ ಮಾಡಿದ ಸುಬೋಧ ರಾಮರಾಯರು. ಉದಾರ ಸುಬೋಧ ರಾಮರಾಯರೆಂದು ಪ್ರಖ್ಯಾತರಾದ ಮೈಸೂರು ರಾಮರಾಯರು 1890 ರಲ್ಲಿ ಚಿಕ್ಕಮಗಳೂರಿನ ಬಡಕುಟುಂಬವೊಂದರಲ್ಲಿ ಹುಟ್ಟಿದರು. ತಂದೆ ಹನುಮಂತರಾಯರು, ತಾಯಿ ಭಾರತೀಬಾಯಿ. ಹೆಂಡತಿಯನ್ನು ಅತ್ಯಲ್ಪ ಕಾಲದಲ್ಲೇ ಕಳೆದುಕೊಂಡ ಹನುಮಂತರಾಯರು. ದೇಶಾಂತರ ಕಣ್ಮರೆಯಾದರಂತೆ, ಮನೆಯಿಂದ ಹೊರಟು ಚಿತ್ರದುರ್ಗದಿಂದ ಶಿವಮೊಗ್ಗೆಯಲ್ಲಿ ನೆಲೆಸಿ ಪಟೇಲಿಕೆ ನಡೆಸಿ, ಮೋಸಕ್ಕೊಳಗಾಗಿ ಮಕ್ಕಳನ್ನು ತೊರೆದು ಹಿರಿಯಣ್ಣನ ಸಹಾಯದಿಂದಲೆ ರಾಮರಾಯರು ಎಲ್.ಎಸ್. ಪರೀಕ್ಷೆ ಮುಗಿಸಿ ಬೆಂಗಳೂರಿಗೆ ಬಂದು ಮೂರನೆಯ ಫಾರಂ ತೇರ್ಗಡೆ ಹೊಂದಿದರು. ಹೊನ್ನಾಳಿಯ ತಾಲ್ಲೂಕು ಕಚೇರಿಯಲ್ಲಿ ಗುಮಾಸ್ತರಾಗಿ ತಮ್ಮ ಮೊದಲ ಉದ್ಯೋಗವನ್ನು ಆರಂಭಿಸಿ, ನಂತರ ಅದೇ ಊರಿನಲ್ಲಿ ಸಬ್ ಕಚೇರಿಯಲ್ಲಿ ಗುಮಾಸ್ತರಾದರು. ರಾಮರಾಯರು ಸಾಹಿತ್ಯಾಸಕ್ತರಾದುದರಿಂದ ಮುದ್ದಣ ಕವಿಯು ವಾರ್ಧಕ ಷಟ್ಪದಿಯಲ್ಲಿ ರಚಿಸಿದ್ದ ಶ್ರೀರಾಮಪಟ್ಟಾಭಿಷೇಕದ ಕಾವ್ಯವನ್ನು ವಚನದಲ್ಲಿ ಬರೆದಿದ್ದರು. ಅದನ್ನು ಕೇಳಿದ ಕರ್ಪೂರ ಶ್ರೀನಿವಾಸರಾಯರು ನೌಕರಿಯಲ್ಲಿ ಸಿಲುಕದೆ ಸ್ವತಂತ್ರ ಜೀವನ ನಡೆಸಿ, ಕುಮಾರವ್ಯಾಸನ ಭಾರತವನ್ನೂ ಸಹ ವಚನ ಗದ್ಯರೂಪದಲ್ಲಿ ರಚಿಸಲು ಸೂಚಿಸಿದರು. ರಾಮರಾಯರು ಅವರ ಮಾತನ್ನು ಪಾಲಿಸಿದರು. 1913 ರಲ್ಲಿ ಅವರು ಬೆಂಗಳೂರಿಗೆ ನೆಲೆಸಿದರು. ಹಲವು ವರ್ಷಗಳು ದಂಡಿನ (Cantonment) ಒಂದು ಶಾಲೆಯಲ್ಲಿ ಉಪಾಧ್ಯಾಯ ವೃತ್ತಿಯನ್ನು ಕೈಗೊಂಡರು. ವೃತ್ತಿಯಲ್ಲಿ ಬಡ್ತಿ ದೊರೆತು ಮುಖ್ಯೋಪಾಧ್ಯಾಯರೂ ಆದರು.

ಸ್ವಭಾವತಃ ಭಾಷಾಭಿಮಾನಿಗಳಾದ ರಾಮರಾಯರು 1915 ರಲ್ಲಿ ‘ಸುಬೋಧ ಕುಸುಮಾಂಜಲಿ ಗ್ರಂಥಮಾಲೆ’ ಪ್ರಾರಂಭಿಸಿದರು. ಸ್ವದೇಶಾಭಿಮಾನ, ಭಾಷಾಭಿಮಾನಿಗಳನ್ನು ಹೆಚ್ಚಿಸಲು ಸುಲಭ, ಸರಳ ಸರ್ವಗ್ರಾಹ್ಯವಾಗುವ ರೀತಿಯಲ್ಲಿ ಐವತ್ತರಿಂದ ಅರವತ್ತು ಪುಟಗಳಿಗೆ ಮೀರದಂತೆ ನಮ್ಮ ದೇಶ ವಿದೇಶಗಳ ಮಹಾಪುರುಷರನ್ನು ಕುರಿತು ಅವರ ಜೀವನ, ಸಾಧನೆಗಳನ್ನು ಸೂಕ್ಷ್ಮ ವಿಮರ್ಶೆಗಳೊಂದಿಗೆ ಬರೆದು ಪ್ರಕಟಿಸಿದರು. ಆ ಪುಸ್ತಕಗಳು ಸುಮಾರು ಅರವತ್ತು ಪುಟಗಳಿದ್ದರೂ ಅವುಗಳ ಬೆಲೆ ಒಂದೊಂದಕ್ಕೆ ಕೇವಲ ನಾಲ್ಕಾಣೆ ಈ ಗ್ರಂಥಮಾಲೆಯ ಆಶ್ರಯದಲ್ಲಿ 26 ಭಗವದ್ ಭಕ್ತರ, 20 ಪೌರಾಣಿಕ ಮಹಾಪುರುಷರ, 8 ಮತೋದ್ಧಾರಕರ, 14 ಧರ್ಮೋದ್ಧಾರಕರ, 25 ಮಹಿಳೆಯರ, 19 ಚಾರಿತ್ರಿಕ ಮಹಾಪುರುಷರ, 17 ಆಧುನಿಕ ಮಹಾಪುರುಷರ ಮತ್ತು 8 ವಿದೇಶಿಯ ಮಹಾಪುರುಷರ ಜೀವನ ಚರಿತ್ರೆಗಳು, ಮೂರು ಕಾವ್ಯಗಳೂ ಪ್ರಕಾಶಿತವಾಗಿವೆ.

www.careerindia.com

CAREERINDIA

ರಾಮರಾಯರ ದೃಷ್ಟಿ ವಿಶಾಲವಾದದ್ದು, ಅದು ಸ್ವದೇಶದಲ್ಲಿ ಮಾತ್ರ ಸೀಮಿತವಾಗದೆ, ವಿದೇಶದಲ್ಲೂ ಹರಿದಿರುವುದನ್ನು ನೋಡಬಹುದು. ಅಷ್ಟೇ ಅಲ್ಲ, ಚರಿತ್ರೆ, ವಿಜ್ಞಾನ, ಮತಧರ್ಮ, ಕಾವ್ಯ, ಪುರಾಣ, ಭಾಗವತ, ರಾಮಾಯಣ, ಜಗತ್ತಿನ ಕಲಾಕಾರರು–ಮೊದಲಾದವರ ಜೀವನ ಚರಿತ್ರೆಯನ್ನು ಬರೆದಿದ್ದಾರೆ. ಆಡಂಬರ ಕಾಣದ ಸರಳ ಶೈಲಿ, ಹೇಳಬೇಕಾದುದನ್ನು ನೇರ ಮನಮುಟ್ಟುವಂತೆ ತಿಳಿಸುವ ವಿಧಾನ ಇವರ ಕಲೆಗಾರಿಕೆಯಾಗಿದೆ. ಅರವತ್ತರವರೆಗಿನವರಿಗೂ ಪ್ರಿಯವಾಗುವಂತೆ, ಅರ್ಥವಾಗುವಂತೆ, ಅವರ ಮೇಲೆ ಪ್ರಭಾವ ಬೀರುವಂತೆ ತಮ್ಮ ಬಾಳಿನಲ್ಲಿ ಸ್ವೀಕರಿಸಿದ್ದ ಸರಳತೆಯನ್ನೇ ಈ ಕೃತಿಗಳಲ್ಲೂ ಪ್ರತಿಬಿಂಬಿಸಿದ್ದಾರೆ. ಆರಂಭ ಹಾಗೂ ಮುಕ್ತಾಯ ಘಟ್ಟಗಳೆಲ್ಲ ಸೂಕ್ಷ್ಮವಾಗಿ ವಿಮರ್ಶಿಸಿ, ವಿಷಯ ಪ್ರತಿಪಾದನೆ ಮಾಡಿದ್ದಾರೆ. "ಆಳವಾದ ಜ್ಞಾನವಿದ್ದೆಡೆಯಲ್ಲಿ ಅಬ್ಬರವಿರದು" ಎಂಬ ಮಾತು ರಾಮರಾಯರ ಶೈಲಿಗೆ ನಿದರ್ಶನವಾಗಿದೆ. ಆದ್ದರಿಂದಲೇ ಅವರು ಚಿರಸ್ಮರಣೀಯರೆಂದು ಸುಮನಾ ಅವರು ಹೇಳಿದ್ದಾರೆ.

**121.** ಸುಬೋಧ ಕುಸುಮಾಂಜಲಿ ಗ್ರಂಥಮಾಲೆ ಪ್ರಾರಂಭಿಸಿದ ಉದ್ದೇಶ :

(1) ವಿವಿಧ ರೀತಿಯ ಜ್ಞಾನ ಪ್ರಸಾರಕ್ಕಾಗಿ
(2) ಯುವ ಜನಾಂಗಕ್ಕೆ ಉನ್ನತ ಮೌಲ್ಯಗಳು ಉಂಟಾಗಲು
(3) ಸಮಾಜಕ್ಕೆ ಒಳ್ಳೆಯ ಸಾಹಿತ್ಯ ಒದಗಿಸಲು
(4) ರಾಜಕೀಯ ಚಳುವಳಿಗೆ ಪ್ರೇರಕವಾಗಲು

**122.** ರಾಮರಾಯರು ಮಾಡಿದ ಇನ್ನೊಂದು ಸಾಹಿತ್ಯದ ಕಾರ್ಯ :

(1) ಕುಮಾರವ್ಯಾಸ ಭಾರತವನ್ನು ಪ್ರಕಟಿಸಿದ್ದು
(2) ಕುಮಾರವ್ಯಾಸ ಭಾರತವನ್ನು ಗದ್ಯದಲ್ಲಿ ಬರೆದದ್ದು
(3) ಕುಮಾರವ್ಯಾಸ ಭಾರತವನ್ನು ಅನುವಾದಿಸಿದ್ದು
(4) ಕುಮಾರವ್ಯಾಸ ಭಾರತಕ್ಕೆ ಟೀಕು ಬರೆದದ್ದು

**123.** ಸುಬೋಧ ರಾಮರಾಯರ ತಂದೆ ಮಾಡಿದ ಕೆಲಸವೇನು ?

(1) ಮನೆಯ ಕೆಲಸ ಮಾಡಿದ್ದ
(2) ಹೆಂಡತಿಯನ್ನು ಕಳೆದುಕೊಂಡು ದುಃಖಿತರಾಗಿದ್ದು
(3) ಸಾಹಿತ್ಯ ರಚನೆಗೆ ಪ್ರೇರಣೆಯಾಗಿದ್ದು
(4) ಮನೆ ಬಿಟ್ಟು ಹೋಗಿದ್ದು

**124.** ಕೃತಿಯ ಸರಳ ಶೈಲಿ ಏನನ್ನು ಪ್ರತಿನಿಧಿಸುತ್ತದೆ ?

(1) ಹೆಚ್ಚು ಪ್ರಸಾರವಾಗಲು ಅನುಕೂಲ
(2) ಪಾಂಡಿತ್ಯಮಯ ಶೈಲಿ ಭಾರವಾಗುತ್ತದೆ
(3) ರಾಮರಾಯರ ಬಾಳಿನ ಸರಳತೆಯ ಪ್ರತಿನಿಧೀಕರಣ
(4) ಓದುಗರಿಗೆ ಅನುಕೂಲ

**125.** ಸುಬೋಧ ಕುಸುಮಾಂಜಲಿ ಗ್ರಂಥಮಾಲೆ ಯಾವುದಕ್ಕೆ ಪ್ರಸಿದ್ಧಿ ?

(1) ದೇಶದ ಮಹಾಪುರುಷರನ್ನು ಕುರಿತ ಪುಸ್ತಕ ಪ್ರಕಟಣೆ
(2) ದೇಶ ಸೇವೆ ಮಾಡಿದ ಗಾಂಧಿ ಅನುಯಾಯಿಗಳ ಕುರಿತ ಕೃತಿಗಳ ಪ್ರಕಟಣೆ
(3) ದೇಶಕ್ಕಾಗಿ ಹೋರಾಡಿದ ವ್ಯಕ್ತಿಗಳ ಬಗ್ಗೆ ಪುಸ್ತಕ ಪ್ರಕಟಣೆ
(4) ದೇಶ ವಿದೇಶದ ಮಹಾಪುರುಷರ ಜೀವನ ಸಾಧನೆ ಕುರಿತ ಪುಟ್ಟ ಪುಸ್ತಕಗಳ ಪ್ರಕಟಣೆ

**126.** 'ಆಳವಾದ ಜ್ಞಾನವಿದ್ದೆಡೆಯಲ್ಲಿ ಅಬ್ಬರವಿರದು'
ಇಂಥ ಮಾತುಗಳನ್ನು ಏನೆನ್ನುತ್ತಾರೆ ?

(1) ದೇಸೀಉಕ್ತಿ (2) ಜಾಣ್ನುಡಿ (3) ಗಾದೆ (4) ಒಗಟು

www.careerindia.com

127. ಪ್ರಕಟಣಾಕಾರ್ಯದ ಜೊತೆಗೆ ಸುಬೋಧ ರಾಮರಾಯರು ಸಾಹಿತಿಯೂ ಆಗಿದ್ದರು ಅನ್ನುವುದಕ್ಕೆ ಆಧಾರ :

(1) ಮುದ್ದಣನ ಶ್ರೀರಾಮಪಟ್ಟಾಭಿಷೇಕವನ್ನು ವಚನದಲ್ಲಿ ಬರೆದದ್ದು

(2) ಮಕ್ಕಳ ಸಾಹಿತ್ಯ ರಚನೆ ಮಾಡಿದ್ದು

(3) ಮಹಿಳೆಯರ ಚರಿತ್ರೆ ಬರೆದದ್ದು

(4) ಮಹಾಪುರುಷರ ಜೀವನವನ್ನು ಕುರಿತು ಬರೆದದ್ದು

128. ಅಲಕ್ಷ್ಯ – ಈ ಪದದ ವಿರುದ್ಧಾರ್ಥಕ ಪದ :

(1) ಜಾಗೃತ (2) ವಿಲಕ್ಷ್ಯ (3) ಲಕ್ಷ್ಯ (4) ಸೋಮಾರಿತನ

**ನಿರ್ದೇಶನ : ಈ ಕೆಳಗಿನ ಲೇಖನ ಭಾಗವನ್ನು ಓದಿ, ಅನುಸರಿಸಿ ಬರುವ ಪ್ರಶ್ನೆಗಳಿಗೆ (ಪ್ರಶ್ನೆ ಸಂಖ್ಯೆ : 129-135) ಸೂಕ್ತ ಉತ್ತರವನ್ನು ಆರಿಸುವುದರ ಮೂಲಕ ಉತ್ತರಿಸಿ.**

ಒಂದು ದಿನ, ತಾನು ಊರಿಗೆ ಹೋಗುವ ನಾಲ್ಕು ದಿನಗಳ ಮುಂಚೆ, "ಚೋಮ, ನಮ್ಮ ಮನೆಯಲ್ಲಿ ಕೆಲಸದ ಜನಕ್ಕೆ ತುಂಬ ತೊಂದರೆ, ಇಲ್ಲಿ, ನಿನ್ನ ಮಕ್ಕಳಿಗೇನು ಕೆಲಸ ?" ಎಂದು ಹೇಳಿ, ಗಿಡ್ಡಿ ಮತ್ತು ಕುಕ್ಕರನ್ನು ತನ್ನ ಜತೆಗೆ ಕಳುಹಿಸಿಕೊಡಲು ಪ್ರೇರಿಸಿದ. ಅವನಿಗೆ ಕುಕ್ಕ ಅಷ್ಟೊಂದು ಬೇಕಾಗಿರಲಿಲ್ಲ. ಆದರೂ ತಂದೆ ಮಗಳೊಬ್ಬಳನ್ನೇ ಕಳುಹಿಸಲು ಒಡಂಬಡನೆಂದು ಆ ಸೂಚನೆಯನ್ನು ಮಾಡಿದ. ಕಾರ್ಕಳ ಬಹುದೂರದ ಊರೆಂದು ಆತ ತಿಳಿದಾನೆಂದು ಅನುಮಾನಿಸಿ, "ಅಲ್ಲಿಗೆ ಅಂಥಾ ದೂರವೇನಿಲ್ಲ. ಹತ್ತಿಯಡ್ಕದಿಂದ ಕೊಕ್ಕಡಕ್ಕೆ ಮೂರು ಗಳಿಗೆ ಹಾದಿ. ಅಲ್ಲಿಂದ ಮೂರು ಗಳಿಗೆಗೆ ಧರ್ಮಸ್ಥಳ. ಧರ್ಮಸ್ಥಳದಲ್ಲಿ ನಿಮ್ಮ ಜನರೇ ಇದ್ದಾರಲ್ಲ" ಎಂದ. ಧರ್ಮಸ್ಥಳದಲ್ಲಿ ಮಲೆಕುಡಿಯರು ಬಹಳ ಹಿಂದೆಯೇ ನೆಲೆಸಿದ್ದರು. ಅವರಿಗೂ ಇವರಿಗೂ ಗಂಡುಹೆಣ್ಣು ತರಲು ಆಗಿನ ಕಾಲಕ್ಕೆ ದೂರ ಎನಿಸಿದ್ದರೂ ಮೂಲೆಗುಂಪಿನ ಜಾತ್ರೆಗೆ ಅವರು ಬರುತ್ತಿದ್ದರು.

ಧರ್ಮಸ್ಥಳದಿಂದ ಎಷ್ಟು ದೂರ ? "ಎಂದು ಕೇಳಿದ ಚೋಮ.

ಛೀ, ದೂರವೇನು .... ಒಂದೇ ಒಂದು ಮಜಲು" ಎಂದ ವಲ್ಲಿ. ಹೀಗೆ ಹಿರಿಮಲೆಯಿಂದ ಮೂಲೆಗುಂಪಿನ ದೂರ ಹೇಳದೆ, ಧರ್ಮಸ್ಥಳದಿಂದ ಮುಂದಿನ ದೂರವನ್ನು ಒಂದು ಮಜಲನ್ನಾಗಿ ಮಾಡಿ, ಮನೋವೇಗದಿಂದ ಹೋಗುವ ಸಾಮೀಪ್ಯವನ್ನು ಆ ಎರಡು ಸ್ಥಳಗಳೊಳಗೆ ವಲ್ಲಿ ಕಲ್ಪಿಸಿದ.

ಚೋಮನಿಗೂ, ಅವನ ಹೆಂಡತಿಗೂ ಮಕ್ಕಳನ್ನು ಕಳುಹಿಸಲು ಅಷ್ಟೊಂದು ಇಷ್ಟವಿರಲಿಲ್ಲ. ಆದರೆ ಧನಿಗಳ ಮನೆಗೆ, ಸೇವೆಗೆ ಕರೆದಾಗ ಹೋಗಲಾರ ಎಂದರೆ ಸಮನಲ್ಲವೆಂದೂ ಕಂಡಿತು. ಹೀಗಾಗಿ ಅನುಮಾನಿಸಿ, ಅನುಮಾನಿಸಿ ಒಂದು ಮಳೆಗಾಲ ಕಳೆಯುತ್ತಲೇ ಅವರನ್ನು ಕಳುಹಿಸಿಕೊಟ್ಟ. "ಮೂಲೆಗುಂಪಿನ ಜಾತ್ರೆಗೆ ಬರುವಾಗ ಅವರನ್ನು ಜತೆಗೆ ಕರೆದು ತರಬೇಕು ಎಂದು ಧನಿಗೆ ಹೇಳಿದ. ಚೋಮ ನಿರಾಶೆಗೊಂಡ ಜಾತ್ರೆಯೇ ಅದು. ಆ ಜಾತ್ರೆಗೆ ಎಲ್ಲಿ ಬಂದಿದ್ದರೂ, ಆತ ಕರೆದೊಯ್ದ ಚೋಮನ ಮಕ್ಕಳನ್ನು ಮಾತ್ರ ಹಿಂದಕ್ಕೆ ಕರೆದು ತರಲಿಲ್ಲ. ಬದಲು, ಚೋಮನೊಡನೆ ಇಲ್ಲದ ಸಮಾಧಾನ ಹೇಳಿ" ನೋಡು, ಹೊರಡುವ ದಿನ ನಿನ್ನ ಮಗಳಿಗೆ ಜ್ವರ ಬಂದಿತ್ತು. ನಡೆಯುವುದಕ್ಕೆ ಸಾಧ್ಯವಿಲ್ಲ. ಕುಕ್ಕನನ್ನೂ ಅದಕ್ಕಾಗಿ ಬಿಟ್ಟು ಬಂದೆ. ನೀನೇನೂ ಯೋಚನೆ ಮಾಡಬೇಡ. ಅವಳೇನು ಸೊರಗಿಲ್ಲ. ಸೊಟ್ಟಾಗಿಲ್ಲ : ನಮ್ಮೂರಿನ ಹವೆ ಅವಳಿಗೆ ಚೆನ್ನಾಗಿ ಹಿಡಿಯುತ್ತದೆ. ಆನೆ ಮರಿಯ ಹಾಗೆ ಈಗ ಬೆಳೆದಿದ್ದಾಳೆ ಎಂದ. ತಂದೆ, ತಾಯಿಯರಿಗೆ ಅದರಿಂದ ಹೇಗೆ ಸಮಾಧಾನವಾಗಬೇಕು ? ಅವರ ಸಮಾಧಾನಕ್ಕೆಂದು ವಲ್ಲಿ ಇಬ್ಬರ ಸಂಬಳವನ್ನೂ ನೋಡು, ನಿನ್ನ ಕೈಯಲ್ಲಿಯೆ ಕೊಟ್ಟಿದ್ದೇನೆ ಎಂದು ಎರಡು ರೂಪಾಯಿಗಳನ್ನು ಎಸೆದ. ರೂಪಾಯಿಗಳನ್ನು ಕಂಡ ಸಂತೋಷವಾದರೂ ಚೋಮನ ಮನಸ್ಸು ತೃಪ್ತಿಗೊಳ್ಳಲಿಲ್ಲ. 'ಮಗಳು ಬೇನೆ ಬಿದ್ದಿರುವಾಗ, ತಾನಾದರೂ ಹೋಗಿ ನೋಡಬೇಕು' ಎಂದು ಆತ ಧನಿಯ ಬೆನ್ನಿಗೆ ಹಟ ಹಿಡಿದು ಹೊರಟೇಬಿಟ್ಟ. ನ್ಯಾಯಕ್ಕೂ, ಹೋಗುವಾಗ ಒಂದೆರಡು ದಿನದ ಆ ಸುಲಭ ಹಾದಿ, ಇಡಿಯ ನಾಲ್ಕು ದಿನಗಳ ಪಯಣವಾದದ್ದನ್ನು ಕಂಡು ಇಷ್ಟು ದೂರವೇ! ಎನಿಸಿತು ಚೋಮನಿಗೆ.

CAREERINDIA

**129.** ಮಲೆಕುಡಿಯರು ಯಾರು ?

(1) ಬೆಟ್ಟದಲ್ಲಿ ವಾಸಿಸುವ ಬುಡಕಟ್ಟು ಜನ (2) ಬೇಟೆಯಾಡುವ ಜನ

(3) ಹಿಂದುಳಿದ ಜನ (4) ಅರಣ್ಯದಲ್ಲಿ ಇರುವವರು

**130.** ವಲ್ಲಿಗೆ ಮನೆಕೆಲಸಕ್ಕಲ್ಲದೆ ಗಿಡ್ಡಿಯನ್ನು ಕರೆದುಕೊಂಡು ಹೋಗುವ ಕಾರಣ :

(1) ಅವಳ ಬಗ್ಗೆ ಇದ್ದ ಆದರ (2) ಕಾಮುಕ ದೃಷ್ಟಿ ಇದ್ದುದರಿಂದ

(3) ತೋಟದ ಕೆಲಸ ಮಾಡಿಸಬಹುದೆಂದು (4) ಅವಳನ್ನು ಮದುವೆಯಾಗಬಹುದೆಂದು

**131.** ವಲ್ಲಿ ಚೋಮನಿಗೆ ಮಾಡಿದ ಮೋಸವೇನು ?

(1) ಮಕ್ಕಳ ಕೂಲಿಗೆ ಹಣ ಕೊಡುವೆ ಎಂದದ್ದು

(2) ಮಕ್ಕಳನ್ನು ಒಳ್ಳೆಯ ಕೆಲಸಕ್ಕೆ ಕರೆದೊಯ್ಯಲೆ ಎಂದಿದ್ದು

(3) ದೂರದ ಪ್ರದೇಶವನ್ನು ಮುಟ್ಟಲು ಬೇಗ ಆಗುತ್ತದೆ ಎಂದಿದ್ದು

(4) ದೂರದ ಪ್ರದೇಶವನ್ನು ಹತ್ತಿರವಿದೆ ಎಂದು ಹೇಳಿದ್ದು

**132.** 'ಸಮನಲ್ಲ' – ಎನ್ನುವ ಪದಕ್ಕೆ ಇಲ್ಲಿಯ ಅರ್ಥ :

(1) ಸರಿ ಎತ್ತರ ಇಲ್ಲ ಎಂದರ್ಥ (2) ಸರಿಯಲ್ಲ ಎಂದರ್ಥ

(3) ಸಮಾನವಾದುದಲ್ಲ ಎಂದರ್ಥ (4) ಸರಿಸಮ ಅಲ್ಲ ಎಂದರ್ಥ

**133.** 'ಬೇನೆ ಬೀಳು' – ಎಂದರೆ ಏನು ?

(1) ಆರೋಗ್ಯ ತಪ್ಪು (2) ಬೇಗನೆ ಮಲಗು

(3) ನಡೆಯುವಾಗ ಬೀಳು (4) ನೋವು ಪಡು

**134.** 'ಮೂರು ಗಳಿಗೆ ಹಾದಿ' – ಎನ್ನುವ ನುಡಿಗಟ್ಟಿನ ಅರ್ಥ :

(1) ಪಕ್ಕದ್ದು ಎಂದು ಅರ್ಥ (2) ಮೂರು ಕ್ಷಣದ ಹಾದಿ

(3) ಮೂರು ತಾಸಿನ ಹಾದಿ ಎಂದರ್ಥ (4) ಹತ್ತಿರದ್ದು ಎಂದು ಅರ್ಥ

**135.** 'ಇಷ್ಟು ದೂರವೇ ?' ಎಂದು ಕೇಳಿದ ಚೋಮನ ಮಾತಿನಲ್ಲಿ ಏನು ವ್ಯಕ್ತವಾಗುತ್ತದೆ ?

(1) ಸಂಶಯ (2) ಆತಂಕ (3) ಮುಗ್ಧತನ (4) ಆಯಾಸ

www.careerindia.com

**136.** ಪ್ರಾಥಮಿಕ ಹಂತದ ಶಿಕ್ಷಕಿಯು ಸಾಮಾನ್ಯವಾಗಿ ಕಲಿಯುವವರಿಗೆ ಚಿತ್ರಕ್ಕೆ ಬಣ್ಣ ತುಂಬಲು ಮತ್ತು ಚಿತ್ರ ಬರೆಯಲು ಉತ್ತೇಜಿಸುತ್ತಾಳೆ. ಇದು ಯಾವುದಕ್ಕೆ ಸಹಾಯಕವಾಗುತ್ತದೆ ?

(1) ಪಾಠಮಾಡುವುದರಿಂದ ಶಿಕ್ಷಕರಿಗೆ ವಿನಾಯಿತಿ.

(2) ತರಗತಿಯಲ್ಲಿ ನಿಶ್ಶಬ್ದವನ್ನು ಕಾಪಾಡಿಕೊಳ್ಳಲು ಮಕ್ಕಳನ್ನು ಚಟುವಟಿಕೆಗಳಲ್ಲಿ ತೊಡಗಿಸುವುದು.

(3) ಉತ್ತಮವಾದ ದೇಹದ ಯಾಂತ್ರಿಕ (ಮೋಟಾರ್) ಕೌಶಲ್ಯಗಳನ್ನು ಅಭಿವೃದ್ಧಿಪಡಿಸುವುದು.

(4) ಕಲಿಯುವವರನ್ನು ಪ್ರೋತ್ಸಾಹಿಸುವುದು.

**137.** ವಿದ್ಯಾರ್ಥಿಗಳು ನಿರ್ದಿಷ್ಟ ತರಗತಿ ಅಥವಾ ಅವಧಿಯ ಕೊನೆಯ ವೇಳೆಗೆ ಅರ್ಜಿಸಿಕೊಳ್ಳಬೇಕಾದ ಜ್ಞಾನ, ಕೌಶಲ್ಯತೆಗಳು, ಧೋರಣೆಗಳನ್ನು ವಿವರಿಸುವ ಹೇಳಿಕೆಗಳು ಈ ಕೆಳಕಂಡವುಗಳ ಅಡಿಯಲ್ಲಿ ಬರುತ್ತದೆ.

(1) ಮೂಲಭೂತ ಅಕ್ಷರ ಜ್ಞಾನದ ಫಲಿತಗಳು

(2) ಬೋಧನಾ ಫಲಿತಗಳು

(3) ಕಲಿಕಾ ಫಲಿತಗಳು

(4) ಗಣಿತ ಸಂಬಂಧಿತ ಫಲಿತಗಳು (numeracy outcomes)

**138.** ಒಬ್ಬ ಶಿಕ್ಷಕಿಯು ಗುಂಪು ಚರ್ಚೆ ಮತ್ತು ಸಹಾಧ್ಯಾಯಿಗಳೊಂದಿಗೆ ಸಂವಹನ ಮಾಡಲು ಉತ್ತೇಜಿಸುತ್ತಾಳೆ. ಆಕೆ ಉಚ್ಚಾರಣೆಗಳನ್ನು ಸರಿಪಡಿಸಲು ಅಥವಾ ಉಚ್ಚಾರದೋಷಗಳನ್ನು ಸರಿಪಡಿಸಲು ಹೋಗಲಿಲ್ಲ. ಅವಳು ತರಗತಿಯಲ್ಲಿ ಬಳಸಿದ ವಿಧಾನ :

(1) ನಿರ್ಮಾಣಾತ್ಮಕ ವಿಧಾನ (Constructivist)

(2) ಸಾಂಪ್ರದಾಯಿಕ ವಿಧಾನ (Traditional)

(3) ಸಾರಸಂಗ್ರಹ ವಿಧಾನ (Eclectic)

(4) ರಚನಾತ್ಮಕ ವಿಧಾನ (Structural)

**139.** ನಿಮ್ಮ ತರಗತಿಯಲ್ಲಿ ಕಾಲವಾಚಿಗಳನ್ನು ಕಲಿಸಲು ನೀವು ಒಬ್ಬನೇ ವ್ಯಕ್ತಿಯ ಎರಡು ಭಾವಚಿತ್ರಗಳನ್ನು ತೋರಿಸುತ್ತೀರಿ. ಒಂದು ಚಿತ್ರವನ್ನು 15 ವರ್ಷಗಳ ಹಿಂದೆ ತೆಗೆದಿರುತ್ತೀರಿ ಮತ್ತು ಒಂದು ಈಗ ತೆಗೆಯಲಾಗಿರುತ್ತದೆ. ನೀವು ಅವನ ಈಗ ಮತ್ತು ಹಿಂದೆ ಅವನು ಕಾಣುತ್ತಿದ್ದ ರೀತಿ, ಅವನ ಹವ್ಯಾಸಗಳು ಮುಂತಾದವುಗಳ ಬಗ್ಗೆ ತರಗತಿಯಲ್ಲಿ ಮಾತನಾಡಲಾರಂಭಿಸುತ್ತೀರಿ. ಈಗ ನೀವು ಬಳಸುತ್ತಿರುವ ವಿಧಾನವು :

(1) ನಿಯಮ ಆಧಾರಿತ ವ್ಯಾಕರಣ (Rule Based Grammar)

(2) ನಿರ್ದೇಶಾತ್ಮಕ ವ್ಯಾಕರಣ (Prescriptive Grammar)

(3) ರಾಚನಿಕ ವ್ಯಾಕರಣ (Structural Grammar)

(4) ಶೈಕ್ಷಣಿಕ ವ್ಯಾಕರಣ (Pedagogical Grammar)

**140.** 'ಮಾಲಿನ್ಯ' ಎಂಬ ವಿಷಯದ ಬಗ್ಗೆ ಪಾಠ ಮಾಡಲು ಸಿದ್ಧಪಡಿಸುವಾಗ, ನಿಮ್ಮ ಮೊದಲ ಕ್ರಮ ಏನಾಗಿರುತ್ತದೆ ?

(1) ಉದ್ದೇಶಗಳನ್ನು ರೂಪಿಸುವುದು

(2) ಪರಿಚಯಾತ್ಮಕ ಪ್ರಶ್ನೆಗಳನ್ನು ಸಿದ್ಧಪಡಿಸುವುದು

(3) ವಿಷಯವನ್ನು ಹಲವಾರು ಸಾರಿ ಅವಲೋಕಿಸುವುದು

(4) ಬೋಧನಾ ಪರಿಕರಗಳನ್ನು ಆಯ್ಕೆ ಮಾಡುವುದು

www.careerindia.com

**141.** ಭಾಷೆಯನ್ನು ಸಹಜವಾಗಿ ಮತ್ತು ಯಾವುದೇ ವ್ಯವಸ್ಥಿತ ಅಭ್ಯಾಸವಿಲ್ಲದೆ ಕಲಿತಾಗ, ಅದನ್ನು ಹೀಗೆ ಕರೆಯುತ್ತಾರೆ :

(1) ಕಲಿಕೆ (Learning)
(2) ಪಾಂಡಿತ್ಯ (Erudition)
(3) ಅರ್ಜನೆ (Acquisition)
(4) ಅಂಗೀಕಾರ (Acceptance)

**142.** ಮಕ್ಕಳು ಈ ಕೆಳಕಂಡ ಸಂದರ್ಭಗಳಲ್ಲಿ ಮಾತ್ರ ತುಂಬಾ ಪರಿಣಾಮಕಾರಿಯಾಗಿ ಭಾಷೆಯನ್ನು ಕಲಿಯುತ್ತಾರೆ.

(1) ಉತ್ತೇಜನ
(2) ಪರಿಣತ ಭಾಷಾ ಶಿಕ್ಷಕರು
(3) ಒಳ್ಳೆಯ ಪಠ್ಯಪುಸ್ತಕ
(4) ಸಂಕೋಚ

**143.** ಭಾಷಾ ಸಕ್ಷಮತೆಯು ಕಲಿಯುವವರಿಗೆ ಈ ಕೆಳಕಂಡ ಅಂಶಗಳನ್ನು ಸಾಧ್ಯಗೊಳಿಸುತ್ತದೆ.

(1) ಹೆಚ್ಚು ಹೆಚ್ಚಾಗಿ ಇಂಗ್ಲಿಷನ್ನು ಬಳಸುವುದು
(2) ವ್ಯಾಕರಣಬದ್ಧವಾಗಿ ಸರಿಯಾದ ಮತ್ತು ಸರಿಯಲ್ಲದ ವಾಕ್ಯಗಳು
(3) ವ್ಯಾಕರಣಬದ್ಧವಾಗಿ ಸರಿಯಲ್ಲದಿದ್ದರೂ, ನಿರರ್ಗಳವಾಗಿ ಮಾತನಾಡಲು
(4) ಭಾಷೆಯನ್ನು ಸೂಕ್ತರೀತಿಯಲ್ಲಿ ಹೇಗೆ ಮತ್ತು ಯಾವಾಗ ಬಳಸಬೇಕೆಂದು ತಿಳಿದುಕೊಳ್ಳುವುದು

**144.** ಶಿಕ್ಷಕಿಯು ತನ್ನ ತರಗತಿಗೆ ಛತ್ರಿ, ರೇನ್‌ಕೋಟ್, ಸ್ಕ್ರೂ ಡ್ರೈವರ್ ಮುಂತಾದಂತಹ ನಿಜ ಜೀವನದಲ್ಲಿ ವಸ್ತುಗಳನ್ನು ತರುತ್ತಾಳೆ. ಅವಳು ಆ ವಸ್ತುಗಳ ಬಗ್ಗೆ ಎರಡು ಅಥವಾ ಮೂರು ವಾಕ್ಯಗಳಲ್ಲಿ ವಿವರಿಸುವಂತೆ ಹೇಳುತ್ತಾಳೆ. ತರಗತಿಯಲ್ಲಿ ಶಿಕ್ಷಕಿಯು ತಂದ ಸಾಮಗ್ರಿಗಳನ್ನು ತಾಂತ್ರಿಕವಾಗಿ ಹೀಗೆ ಕರೆಯುತ್ತಾರೆ :

(1) ದಿನನಿತ್ಯದ ಬಳಕೆಯ ವಸ್ತುಗಳು (Realia)
(2) ಭಾಷಾ ಪರಿಕರಗಳು (Language inputs)
(3) ಬೋಧನಾ ಸಾಧನಗಳು (Teaching instruments)
(4) ಸಾಧನ–ಪರಿಕರಗಳು (Tools)

**145.** ರಾಜು ಇಂದು ಶಾಲೆಗೆ ಹೋಗುತ್ತಿರುವುದರಿಂದ ಅವನು ತುಂಬಾ ಸಂತೋಷದಿಂದಿದ್ದಾನೆ. ಅವನ ಕುಟುಂಬದಲ್ಲಿ ಶಾಲೆಗೆ ಹೋಗುತ್ತಿರುವವರಲ್ಲಿ ಅವನೇ ಮೊದಲಿಗ. ಅವನ ಪೋಷಕರೂ ಸೇರಿದಂತೆ ಅವನ ಕುಟುಂಬದ ಯಾರೂ ಯಾವುದೇ ಶಾಲೆಯಲ್ಲಿ ಎಂದೂ ಪ್ರವೇಶಕ್ಕೆ ದಾಖಲಾದವರಲ್ಲ. ಹಾಗಾಗಿ ರಾಜು __________ ಕಲಿಯುವವನಾಗಿದ್ದಾನೆ.

(1) ಅಲ್ಪಸಂಖ್ಯಾತ (Minority)
(2) ಮೊದಲನೆಯ ತಲೆಮಾರು
(3) ಎರಡನೆಯ ತಲೆಮಾರು
(4) ಅಂಚಿನಲ್ಲಿರುವವರು (Marginalised)

**146.** __________ ನ ಪ್ರಮುಖ ಲಕ್ಷಣಗಳಲ್ಲಿ ಒಂದೆಂದರೆ, ಕಲಿಯುವವರು ಜೋಡಿಯಾಗಿಯಾಗಲಿ ಅಥವಾ ಗುಂಪುಗಳಲ್ಲಿಯಾಗಲಿ ಸಾಮೂಹಿಕವಾಗಿ ಸಮಸ್ಯೆಗಳನ್ನು ಪರಿಹರಿಸುವುದು.

(1) ರಾಚನಿಕ ಪ್ರಸ್ತಾವ (Structural approach)
(2) ಸಂವಹನಶೀಲ ಭಾಷಾ ಬೋಧನೆ
(3) ವರ್ತನಾವಾದಿ ಪ್ರಸ್ತಾವ (Behaviourist approach)
(4) ಸಂಪೂರ್ಣ ಭಾಷಾ ಪ್ರಸ್ತಾವನೆ (Whole language approach)

CAREERINDIA

**147.** ಒಬ್ಬ ಶಿಕ್ಷಕರು ತನ್ನ ವಿದ್ಯಾರ್ಥಿಗಳಿಗೆ 'ನೀರು' ಎಂಬ ವಿಷಯದ ಮೇಲೆ ಒಂದು ಪ್ಯಾರಾವನ್ನು ಬರೆಯಲು ಸೂಚಿಸುತ್ತಾರೆ. ಆಗ ವಿದ್ಯಾರ್ಥಿಗಳು ವಿಜ್ಞಾನ ಮತ್ತು ಸಮಾಜ ವಿಜ್ಞಾನ ತರಗತಿಗಳಲ್ಲಿ ನೀರಿನ ಬಗ್ಗೆ ಏನನ್ನು ಕಲಿಸಲಾಗಿದೆ ಎಂಬುದನ್ನು ಚರ್ಚಿಸಲಾರಂಭಿಸುತ್ತಾರೆ. ಆಗ ಅವರು ನೀರಿನ ಬಗ್ಗೆ ಪ್ಯಾರಾವನ್ನು ಬರೆಯಲು ಪ್ರಾರಂಭಿಸುತ್ತಾರೆ. ಇದು ಈ ಕೆಳಕಂಡ ಸಂಗತಿಗೆ ಉದಾಹರಣೆಯಾಗಿದೆ.

(1) ಸಂವಹನಶೀಲ ಪ್ರಸ್ತಾವನೆ (approach)
(2) ಬಳಕೆಯಲ್ಲಿರುವ ಭಾಷೆ
(3) ವಿಜ್ಞಾನದಲ್ಲಿ ಬಳಸುವ ಭಾಷೆ
(4) ಪಠ್ಯಕ್ರಮದ ಹೊರಗಿನ ಭಾಷೆ

**148.** ಪಾಠದಲ್ಲಿ ಬಳಸಿದ ಭಾಷೆಯು ಕಲಿಯುವವರಿಗೆ ತುಂಬಾ ಕಷ್ಟವಾಗಿದೆ ಎಂಬ ಸಂಗತಿ ಒಬ್ಬ ಶಿಕ್ಷಕಿಯಾಗಿ ನಿಮ್ಮ ಗಮನಕ್ಕೆ ಬರುತ್ತದೆ. ನೀವು ಭಾಷೆಯನ್ನು ಸರಳೀಕರಿಸಿ, ನಿಮ್ಮ ವಿದ್ಯಾರ್ಥಿಗಳಿಗೆ ಸರಿಹೋಗುವ ಹಾಗೆ ಅಡಕದ ಅಂಶಗಳಲ್ಲಿ ಕೆಲವು ಬದಲಾವಣೆಗಳನ್ನು ಸಹ ಮಾಡುತ್ತೀರಿ. ನೀವು ಹೀಗೆ ಮಾಡಿದ್ದನ್ನು ಈ ರೀತಿ ಕರೆಯುತ್ತಾರೆ :

(1) ಅವಲೋಕನ (Review)
(2) ಪರಿಗ್ರಹಿಸುವುದು (Adopting)
(3) ಅನುರೂಪಣೀಯತೆ (Adaption)
(4) ಮೌಲ್ಯಮಾಪನ (Evaluation)

**149.** ನೀವು ಪ್ರತಿಯೊಬ್ಬರೂ ಹಿಂದಿಯನ್ನು ಮಾತನಾಡುವ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದೀರಿ. ನೀವೂ ಸಹ ಯಾವುದೇ ಶಾಲೆಗೆ ಹೋಗದೆ ಈ ಭಾಷೆಯನ್ನು ಬಳಸಲಾರಂಭಿಸಿದ್ದೀರಿ. ತರುವಾಯ ನೀವು ಶಾಲೆಗೆ ಹೋದ ನಂತರ, ನೀವು ಇಂಗ್ಲಿಷ್, ಸಂಸ್ಕೃತ, ಹಿಂದಿ, ಉರ್ದು ಭಾಷೆಗಳನ್ನು ಅಧ್ಯಯನ ಮಾಡಿದಿರಿ. ಈಗ ನೀವು ಇಂಗ್ಲಿಷನ್ನು ತುಂಬಾ ನಿರರ್ಗಳವಾಗಿ ಮಾತನಾಡುತ್ತೀರಿ. ಈಗ ನಿಮ್ಮ ಪ್ರಥಮ ಭಾಷೆಯಾವುದು ?

(1) ಸಂಸ್ಕೃತ
(2) ಇಂಗ್ಲಿಷ್
(3) ಹಿಂದಿ
(4) ಉರ್ದು

**150.** ನೀವು ಪಾಠಮಾಡುವುದಕ್ಕೆ ಹೋದಾಗ, ಪಠ್ಯಪುಸ್ತಕವು ಪ್ರಾಸಗಳು ಮತ್ತು ಚಿತ್ರಾಧಾರಿತ ಕತೆಗಳೊಂದಿಗೆ ಪ್ರಾರಂಭವಾಗಿ ಅಕ್ಷರಗಳೊಂದಿಗೆ ಕೊನೆಗೊಳ್ಳುತ್ತದೆ. ಭಾಷಾ ಶಿಕ್ಷಣದಲ್ಲಿ ಯಾವ ವಿಧಾನವು ಈ ರೀತಿಯ ವ್ಯವಸ್ಥೆಯನ್ನು ಸೂಚಿಸುತ್ತದೆ ?

(1) ಸೌಂದರ್ಯ ದೃಷ್ಟಿಯ ವಿಧಾನ
(2) ಬಾಟಮ್ ಅಪ್ ಅಪ್ರೋಚ್
(3) ಟಾಪ್ ಡೌನ್ ಅಪ್ರೋಚ್
(4) ಸಾರಸಂಗ್ರಹಕ ವಿಧಾನ (Eclective approach)

- o O o -

www.careerindia.com

SPACE FOR ROUGH WORK

www.careerindia.com

CAREERINDIA

**ಕೆಳಗೆ ಕಾಣಿಸಿರುವ ಸೂಚನೆಗಳನ್ನು ಗಮನವಿಟ್ಟು ಓದಿರಿ :**

1. ಕೇಳಲಾಗಿರುವ ಪ್ರಶ್ನೆಗಳಿಗೆ ಉತ್ತರಿಸಬೇಕಾದ ವಿಧಾನವನ್ನು ಕೊಡಲಾಗಿರುವ ಪ್ರಶ್ನೆಪತ್ರಿಕೆಯಲ್ಲಿ ಸ್ಪಷ್ಟವಾಗಿ ಸೂಚಿಸಲಾಗಿದೆ, ಉತ್ತರಿಸುವ ಮುನ್ನ ಸೂಚನೆಗಳನ್ನು ಸರಿಯಾಗಿ ಓದಿ ಅರ್ಥ ಮಾಡಿಕೊಳ್ಳಬೇಕು.
2. ಪ್ರತಿಯೊಂದು ಪ್ರಶ್ನೆಗೆ 4 ವಿಕಲ್ಪ ಉತ್ತರಗಳನ್ನು ಕೊಡಲಾಗಿದೆ. (OMR) ಉತ್ತರ ಪತ್ರಿಕೆಯ **ಪುಟ–2** ರಲ್ಲಿ ಕೇವಲ ಒಂದು ವೃತ್ತವನ್ನು ಮಾತ್ರ **ಕಪ್ಪು/ನೀಲಿ ಬಾಲ್ ಪಾಯಿಂಟ್ ಪೆನ್** ನಿಂದ ತುಂಬಿಸಬೇಕು. ಒಂದು ಬಾರಿ ಉತ್ತರ ನಮೂದಿಸಿದ ಮೇಲೆ ಬದಲಾಯಿಸಲು ಸಾಧ್ಯವಿಲ್ಲ.
3. ಉತ್ತರ ಪತ್ರಿಕೆ ಮಡಚಬಾರದು, ಈ ಬಗ್ಗೆ ಪರೀಕ್ಷಾರ್ಥಿ ಎಚ್ಚರಿಕೆ ವಹಿಸಬೇಕು, ಉತ್ತರ ಪತ್ರಿಕೆಯ ಮೇಲೆ ಬೇರೆ ಯಾವುದೇ ಗುರುತು ಬೀಳಬಾರದು. ಪರೀಕ್ಷಾರ್ಥಿ ತನ್ನ ಅನುಕ್ರಮಣಿಕೆ ಸಂಖ್ಯೆಯನ್ನು ಉತ್ತರ ಪತ್ರಿಕೆಯಲ್ಲಿ ನಿರ್ಧಾರಿತವಾದ ಸ್ಥಳವಲ್ಲದೇ ಬೇರೆ ಎಲ್ಲಿಯೂ ಬರೆಯಬಾರದು.
4. ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಗಳನ್ನು ಎಚ್ಚರಿಕೆಯಿಂದ ಉಪಯೋಗಿಸಿ, ಯಾಕೆಂದರೆ ಯಾವುದೇ ಪರಿಸ್ಥಿತಿಯಲ್ಲಿ (ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಕೋಡ್ ಅಥವಾ ಸಂಖ್ಯೆ ಬೇರೆ ಬೇರೆಯಾಗಿರುವ ಸ್ಥಿತಿಯನ್ನು ಹೊರತುಪಡಿಸಿ) ಬೇರೆ ಪ್ರಶ್ನೆ ಪತ್ರಿಕೆ ಕೊಡಲಾಗುವುದಿಲ್ಲ.
5. ಪ್ರಶ್ನೆ ಪತ್ರಿಕೆ/ಉತ್ತರ ಪತ್ರಿಕೆಯಲ್ಲಿ ಕೊಟ್ಟಿರುವ ಪ್ರಶ್ನೆಪತ್ರಿಕೆಯ ಸಂಕೇತ ಮತ್ತು ಸಂಖ್ಯೆಯನ್ನು ಪರೀಕ್ಷಾರ್ಥಿಯು ಹಾಜರಿ ಪತ್ರದಲ್ಲಿ ಸರಿಯಾಗಿ ಬರೆಯಬೇಕು (Attendance Sheet).
6. OMR ಉತ್ತರಪತ್ರಿಕೆಯಲ್ಲಿ ಸಂಕೇತಿಸಿದ ಮಾಹಿತಿಗಳನ್ನು ಗಣಕಯಂತ್ರವು ಓದುತ್ತದೆ. ಆದ್ದರಿಂದ ಯಾವುದೇ ಮಾಹಿತಿಗಳನ್ನು ಅಪೂರ್ಣಗೊಳಿಸಕೂಡದು ಮತ್ತು ಪ್ರವೇಶಪತ್ರದಲ್ಲಿರುವ ಮಾಹಿತಿಗೆ ಅದು ಭಿನ್ನವಾಗಬಾರದು.
7. ಪರೀಕ್ಷಾರ್ಥಿಯು, ಪರೀಕ್ಷಾ ಹಾಲ್/ಕೋಣೆಯಲ್ಲಿ ಪ್ರವೇಶ ಕಾರ್ಡ್ ಅಲ್ಲದೇ ಬೇರೆ ಯಾವ ರೀತಿಯ ಪಠ್ಯಸಾಮಗ್ರಿ, ಮುದ್ರಿತ ಅಥವಾ ಕೈಯಲ್ಲಿ ಬರೆದ, ಕಾಗದದ ಚೀಟಿಗಳು, ಪೇಜರ್, ಮೊಬೈಲ್ ಫೋನು, ಇಲೆಕ್ಟ್ರಾನಿಕ್ ಉಪಕರಣಗಳು ಅಥವಾ ಬೇರೆ ಪ್ರಕಾರದ ಸಾಮಗ್ರಿಗಳನ್ನು ತರುವುದು ಅಥವಾ ಉಪಯೋಗ ಮಾಡಲು ಅನುಮತಿ ಇಲ್ಲ.
8. ಪರೀಕ್ಷಾ ಕೊಠಡಿಯೊಳಗೆ ಮೊಬೈಲ್ ಫೋನ್, ವೈರ್‌ಲೆಸ್ ಸಂಪರ್ಕ ಉಪಕರಣಗಳನ್ನು ಮತ್ತಿತರ ನಿಷೇಧಿತ ವಸ್ತುಗಳನ್ನು ತರಬಾರದು, ಇದನ್ನು ಮೀರಿ ನಡೆದಲ್ಲಿ ಅಥವಾ ಉಲ್ಲಂಘಿಸಿದರೆ ಆ ಅಭ್ಯರ್ಥಿಗಳು ಶಿಕ್ಷಾರ್ಹರಾಗುತ್ತಾರೆ ಮತ್ತು ಅವರನ್ನು ಪರೀಕ್ಷೆಯಿಂದ ಹೊರಹಾಕಲೂಬಹುದು.
9. ಕೇಳಿದಾಗ, ಪ್ರತಿಯೊಬ್ಬ ಪರೀಕ್ಷಾರ್ಥಿ ತನ್ನ ಪ್ರವೇಶ ಕಾರ್ಡ್‌ನ್ನು ನಿರೀಕ್ಷಕರಿಗೆ ತೋರಿಸಬೇಕು.
10. ಅಧೀಕ್ಷಕರು ಅಥವಾ ನಿರೀಕ್ಷಕರ ವಿಶೇಷ ಅನುಮತಿ ಇಲ್ಲದೇ ಯಾರೇ ಪರೀಕ್ಷಾರ್ಥಿ ತನ್ನ ಸ್ಥಾನವನ್ನು ಬಿಡಬಾರದು.
11. ಕಾರ್ಯನಿರತ ನಿರೀಕ್ಷಕರಿಗೆ ತನ್ನ ಉತ್ತರ ಪತ್ರಿಕೆ ಕೊಡದೇ ಹಾಗೂ ಹಾಜರಿ ಪತ್ರದಲ್ಲಿ ಎರಡು ಬಾರಿ ಸಹಿ ಹಾಕದೇ ಯಾವ ಪರೀಕ್ಷಾರ್ಥಿಯೂ ಪರೀಕ್ಷಾ ಹಾಲ್‌ನಿಂದ ಹೊರಗೆ ಹೋಗಬಾರದು. ಹಾಗೊಂದು ವೇಳೆ ಪರೀಕ್ಷಾರ್ಥಿ ಎರಡನೇ ಬಾರಿ ಹಾಜರಿ ಪತ್ರದಲ್ಲಿ ಸಹಿ ಮಾಡದೇ ಇದ್ದರೆ, ಆ ವ್ಯಕ್ತಿ, ಉತ್ತರ ಪತ್ರಿಕೆ ಹಿಂದೆ ಕೊಟ್ಟಿಲ್ಲ ಮತ್ತು ಇದು ಅನುಚಿತ ಸಾಧನ ಬಳಕೆಯ ಪ್ರಕರಣ ಎಂದು ತಿಳಿದು ಸೂಕ್ತ ಕ್ರಮ ಕೈಗೊಳ್ಳಲಾಗುವುದು. **ಪರೀಕ್ಷಾರ್ಥಿಗಳು ತಮ್ಮ ಎಡಗೈಯ ಹೆಬ್ಬಟ್ಟಿನ ಗುರುತನ್ನು ಹಾಜರಿ ಪತ್ರದಲ್ಲಿ ಕೊಟ್ಟಿರುವ ಸ್ಥಳದಲ್ಲಿ ಹಾಕಬೇಕು.**
12. ಇಲೆಕ್ಟ್ರಾನಿಕ್/ಹಸ್ತ ಚಾಲನೆಯ ಗಣಕಯಂತ್ರ (Calculator) ಉಪಯೋಗ ನಿಷೇಧಿಸಲಾಗಿದೆ.
13. ಪರೀಕ್ಷಾ ಹಾಲ್‌ನಲ್ಲಿ, ಪರೀಕ್ಷಾರ್ಥಿ ಬೋರ್ಡ್‌ನ ಎಲ್ಲಾ ನೀತಿ–ನಿಯಮಾವಳಿಗಳ ಪಾಲನೆಗಾಗಿ ಬದ್ಧನಾಗಿರುತ್ತಾರೆ. ಅನುಚಿತ ಸಾಧನಗಳ ಎಲ್ಲಾ ಪ್ರಕರಣಗಳನ್ನು ಬೋರ್ಡ್‌ನ ನೀತಿ–ನಿಯಮಾವಳಿಗಳ ಅನುಸಾರ ನಿರ್ಧರಿಸಲಾಗುವುದು.
14. ಎಂತಹುದೇ ಪರಿಸ್ಥಿತಿಯಲ್ಲಿ ಪ್ರಶ್ನೆ ಪತ್ರಿಕೆ ಮತ್ತು ಉತ್ತರ ಪತ್ರಿಕೆಯ ಯಾವುದೇ ಭಾಗವನ್ನು ಬೇರೆ ಮಾಡಬಾರದು.
15. **ಪರೀಕ್ಷೆ ಮುಗಿದ ನಂತರ, ಪರೀಕ್ಷಾರ್ಥಿ, ಪರೀಕ್ಷಾ ಹಾಲ್/ಕೋಣೆಯಿಂದ ಹೊರಗೆ ಬರುವ ಮೊದಲು, ನಿರೀಕ್ಷಕರಿಗೆ ಉತ್ತರ ಪತ್ರಿಕೆಯನ್ನು ತಪ್ಪದೇ ಒಪ್ಪಿಸಬೇಕು. ಪರೀಕ್ಷಾರ್ಥಿ ಪ್ರಶ್ನೆ ಪತ್ರಿಕೆಯನ್ನು ತಮ್ಮೊಂದಿಗೆ ತೆಗೆದುಕೊಂಡು ಹೋಗಬಹುದು.**

www.careerindia.com

## निम्नलिखित निर्देशों को ध्यान से पढ़ें :

1. जिस प्रकार से विभिन्न प्रश्नों के उत्तर दिए जाने हैं उसका वर्णन परीक्षा पुस्तिका में किया गया है, जिसे आप प्रश्नों का उत्तर देने से पहले ध्यान से पढ़ लें।
2. प्रत्येक प्रश्न के लिए दिए गए चार विकल्पों में से सही उत्तर के लिए OMR उत्तर पत्र के **पृष्ठ-2** पर केवल एक वृत्त को ही पूरी तरह **नीले/काले बॉल पॉइन्ट पेन** से भरें। एक बार उत्तर अंकित करने के बाद उसे बदला नहीं जा सकता है।
3. परीक्षार्थी सुनिश्चित करें कि इस उत्तर पत्र को मोड़ा न जाए एवं उस पर कोई अन्य निशान न लगाएँ। परीक्षार्थी अपना अनुक्रमांक उत्तर-पत्र में निर्धारित स्थान के अतिरिक्त अन्यत्र न लिखें।
4. परीक्षा पुस्तिका एवं उत्तर पत्र का ध्यानपूर्वक प्रयोग करें, क्योंकि किसी भी परिस्थिति में (केवल परीक्षा पुस्तिका एवं उत्तर पत्र के कोड या संख्या में भिन्नता की स्थिति को छोड़कर) दूसरी परीक्षा पुस्तिका उपलब्ध नहीं करायी जाएगी।
5. परीक्षा पुस्तिका/उत्तर पत्र में दिए गए परीक्षा पुस्तिका कोड व संख्या को परीक्षार्थी सही तरीके से उपस्थिति-पत्र में लिखें।
6. OMR उत्तर पत्र में कोडित जानकारी को एक मशीन पढ़ेगी। इसलिए कोई भी सूचना अधूरी न छोड़ें और यह प्रवेश-पत्र में दी गई सूचना से भिन्न नहीं होनी चाहिए।
7. परीक्षार्थी द्वारा परीक्षा हॉल/कक्ष में प्रवेश-पत्र के सिवाय किसी प्रकार की पाठ्य-सामग्री, मुद्रित या हस्तलिखित, कागज़ की पर्चियाँ, पेजर, मोबाइल फोन, इलेक्ट्रॉनिक उपकरण या किसी अन्य प्रकार की सामग्री को ले जाने या उपयोग करने की अनुमति नहीं है।
8. मोबाइल फोन, बेतार संचार युक्तियाँ (स्विच ऑफ अवस्था में भी) और अन्य प्रतिबंधित वस्तुएँ परीक्षा हॉल/कक्ष में नहीं लाई जानी चाहिए। इस सूचना का पालन न होने पर इसे परीक्षा में अनुचित साधनों का प्रयोग माना जाएगा और परीक्षार्थी विरुद्ध कार्यवाही की जाएगी, परीक्षा रद्द करने सहित।
9. पूछे जाने पर प्रत्येक परीक्षार्थी, निरीक्षक को अपना प्रवेश-पत्र दिखाएँ।
10. केन्द्र अधीक्षक या निरीक्षक की विशेष अनुमति के बिना कोई परीक्षार्थी अपना स्थान न छोड़ें।
11. कार्यरत निरीक्षक को अपना उत्तर पत्र दिए बिना एवं उपस्थिति-पत्र पर दुबारा हस्ताक्षर किए बिना परीक्षार्थी परीक्षा हॉल/कक्ष नहीं छोड़ेंगे। यदि किसी परीक्षार्थी ने दूसरी बार उपस्थिति-पत्र पर हस्ताक्षर नहीं किए, तो यह माना जाएगा कि उसने उत्तर पत्र नहीं लौटाया है और यह अनुचित साधन का मामला माना जाएगा। **परीक्षार्थी अपने बाएँ हाथ के अंगूठे का निशान उपस्थिति-पत्र में दिए गए स्थान पर अवश्य लगाएँ।**
12. इलेक्ट्रॉनिक/हस्तचालित परिकलक का उपयोग वर्जित है।
13. परीक्षा हॉल/कक्ष में आचरण के लिए परीक्षार्थी परीक्षण संस्था के सभी नियमों एवं विनियमों द्वारा नियमित हैं। अनुचित साधनों के सभी मामलों का फैसला परीक्षण संस्था के नियमों एवं विनियमों के अनुसार होगा।
14. किसी भी परिस्थिति में परीक्षा पुस्तिका और उत्तर पत्र का कोई भाग अलग न करें।
15. **परीक्षा सम्पन्न होने पर, परीक्षार्थी हॉल/कक्ष छोड़ने से पूर्व उत्तर पत्र निरीक्षक को अवश्य सौंप दें।** ***परीक्षार्थी अपने साथ इस परीक्षा पुस्तिका को ले जा सकते हैं।***

## READ THE FOLLOWING INSTRUCTIONS CAREFULLY :

1. The manner in which the different questions are to be answered has been explained in the Test Booklet which you should read carefully before actually answering the questions.
2. Out of the four alternatives for each question, only one circle for the correct answer is to be darkened completely with **Blue / Black Ball Point Pen** on **Side-2** of the OMR Answer Sheet. The answer once marked is not liable to be changed.
3. The candidates should ensure that the Answer Sheet is not folded. Do not make any stray marks on the Answer Sheet. Do not write your Roll No. anywhere else except in the specified space in the Answer Sheet.
4. Handle the Test Booklet and Answer Sheet with care, as under no circumstances (except for discrepancy in Test Booklet Code or Number and Answer Sheet Code or Number), another set will be provided.
5. The candidates will write the correct Test Booklet Code and Number as given in the Test Booklet/Answer Sheet in the Attendance Sheet.
6. A machine will read the coded information in the OMR Answer Sheet. Hence, no information should be left incomplete and it should not be different from the information given in the Admit Card.
7. Candidates are not allowed to carry any textual material, printed or written, bits of papers, pager, mobile phone, electronic device or any other material except the Admit Card inside the examination hall/room.
8. Mobile phones, wireless communication devices (even in switched off mode) and the other banned items should not be brought in the examination halls/rooms. Failing to comply with this instruction, it will be considered as using unfair means in the examination and action will be taken against the candidate including cancellation of examination.
9. Each candidate must show on demand his/her Admit Card to the Invigilator.
10. No candidate, without special permission of the Centre Superintendent or Invigilator, should leave his/her seat.
11. The candidates should not leave the Examination Hall/Room without handing over their Answer Sheet to the Invigilator on duty and sign the Attendance Sheet twice. Cases where candidate has not signed the Attendance Sheet second time will be deemed not to have handed over the Answer Sheet and dealt with as an unfair means case. **The candidates are also required to put their left hand THUMB impression in the space provided in the Attendance Sheet.**
12. Use of Electronic/Manual Calculator is prohibited.
13. The candidates are governed by all Rules and Regulations of the Examining Body with regard to their conduct in the Examination Hall/Room. All cases of unfair means will be dealt with as per Rules and Regulations of the Examining Body.
14. No part of the Test Booklet and Answer Sheet shall be detached under any circumstances.
15. **On completion of the test, the candidate must hand over the Answer Sheet to the Invigilator in the Hall / Room.** ***The candidates are allowed to take away this Test Booklet with them.***

www.careerindia.com